1956

ಭಕ್ತ ಶ್ರೀ ಗೋವಿಂದದಾಸರು

ವಿಶಾಲ ಮೈಸೂರಿನ ರಾಜ್ಯಪಾಲರಾದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್,
ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು
ಮದರಾಸಿನ ಹೋಟೆಲ್ ದಾಸಪ್ರಕಾಶದ
"ದಾಸಮಂದಿರ"ದಲ್ಲಿ
ನೆರವೇರಿಸಿದ

ಭಕ್ತ ಶ್ರೀ ಗೋವಿಂದದಾಸರ
ಭಾವಚಿತ್ರದ ಅನಾವರಣ ಮಹೋತ್ಸವದಲ್ಲಿ
ಪ್ರಕಟಿತವಾದುದು

29—12—1956


ಪಂಡಿತ ಎಸ್. ರಾಘವೇಂದ್ರ ಬಲ್ಲಾಳರು
ಅರ್ಪಿಸಿದ ಕಾಣಿಕೆ.

ಮದರಾಸು
29 ಡಿಸೆಂಬರ್ 1956.


ಕೆ. ಸೀತಾರಾಮರಾವ್.




ಉಡುಪಿ ಶ್ರೀಕೃಷ್ಣ



ಉಡುಪಿ ಶ್ರೀ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಅಖಿಲ ಭಾರತ ಮಾಧ್ವಮಹಾಮಂಡಲದ ಅಧ್ಯಕ್ಷರು



ಮೈಸೂರಿನ ರಾಜಪ್ರಮುಖರಾದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು.



ಭಕ್ತ ಶ್ರೀ ಗೋವಿಂದದಾಸರು

(1854—1940)

ಶ್ರೀ ಕೆ. ಸೀತಾರಾಮರಾಯರ ತೀರ್ಥರೂಪರು. ಇವರು ಉಡುಪಿ ಶ್ರೀಕೃಷ್ಣನ ಪಾದಾರವಿಂದದಲ್ಲಿ ಸುಮಾರು 70 ವರ್ಷಗಳಕಾಲ ನಾಮಯಜ್ಞ ನರ್ತನ ಭಜನೆಗಳಿಂದ ತಮ್ಮ ಪವಿತ್ರಜೀವನವನ್ನು ಸಮರ್ಪಿಸಿದವರು.

ಮುನ್ನುಡಿ

ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಅನುಗ್ರಹಿಸಿದುದು

ಭಕ್ತಿಯು ಮಾನವ ಜೀವನದ ಎಲ್ಲ ಅಂಗಗಳನ್ನೂ ಪೋಷಿಸುವ ಅಮೃತ ಸ್ಯಂದಿಯಾದ ಚೇತೋಹಾರಿಯಾದ ರಸಧಾರೆಯಾಗಿದೆ. ವಿವಿಧ ಭೌತಿಕ, ಸಾಂಪತ್ತಿಕ ಸಾಧನಗಳನ್ನು ಬೆಳೆಸುವ ಸಂತತಪ್ರಯತ್ನ ನಡೆದರೂ ಎಲ್ಲಾ ಸಕಾರಿಗಳಾದ ವೈಲಾಸಿಕ ಸಾಮಗ್ರಿಗಳ ಸಮಗ್ರತೆಯಿದ್ದರೂ ಭಗವತ್ಪ್ರೇಮದ ರಸವಾಹಿನಿಯಿಂದ ವಂಚಿತವಾದ ಜೀವನವು ನೀರಸವಾಗಿ ಚೈತನ್ಯರಹಿತವಾದ ಶರೀರದಂತೆ, ರಸರಹಿತವಾದ ಕಾವ್ಯಾಲಹರಿಯಂತೆ ನಿಷ್ಕ್ರಿಯವೂ ಅನಾಸ್ವಾದ್ಯವೂ ಆಗುವುದು. ಇಂತಹ ಬಾಳುವೆಯು ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ, ಸಮೃದ್ಧಿ, ಪ್ರಸನ್ನತೆಗಳನ್ನು ತಂದಿರಿಸಲಾರದು. ಈಗ ಜಗತ್ತಿನಲ್ಲಿ ಆರ್ಥಿಕ, ಭೌತಿಕ ಪ್ರಗತಿಯ ಕಾರ್ಯವು ಭರದಿಂದ ಸಾಗುತ್ತಿದ್ದು, ಮೇಲ್ಮಟ್ಟದ ಸಮಾಜದ ಚಿತ್ರವನ್ನು ರೂಪಿಸುವ ಉತ್ಸಾಹ ಮತ್ತು ಉದ್ದೇಶವು ವ್ಯಕ್ತವಾಗುತ್ತಿದ್ದರೂ, ಈ ಎಲ್ಲ ಸಾಮಾಜಿಕ ಅಭ್ಯುತ್ಥಾನದ ಪ್ರೇರಣಾಶಕ್ತಿಯಾದ ಭಕ್ತಿಯ ಭಾವವನ್ನು ಜನಾಂಗದ ಹೃದಯದಲ್ಲಿ ಬೇರೂರಿಸುವ ಅವ್ಯಾಹತ ಪ್ರಯತ್ನವು ನಡೆಯಬೇಕಾಗಿದೆ. ಹೃದಯ ಪೀಠದಲ್ಲಿ ಭಕ್ತಿಯ ಆಧಾರ ಶಿಲೆಯು ಸ್ಥಾಪನೆಯಾಗದೆ ಕಟ್ಟಿದ ಸಮಾಜ ಮಂದಿರವು ಖಂಡಿತವಾಗಿಯೂ ಕುಸಿದು ಬೀಳುವ ಭೀಕರ ಅನಾಹುತ ಪ್ರಸಂಗವಿದೆ. ಭಕ್ತಿ ಪ್ರವಾಹದ ಅಲೆಗಳ ಧಾರಾವಾಹಿ ಸಂಘಾತದಿಂದಲೇ ಹೃದಯತಟದಲ್ಲಿ ಸದ್ಭಾವದ ಅಂಕುರಗಳು ಚಿಗುರಲು ಅವಕಾಶವಾಗಿ ಅವುಗಳಿಂದ ಸಕ್ರಿಯಸಂಘಟಿತ ಶಾಖೋಪಶಾಖೆಗಳು ಬೆಳೆದು ದಿವ್ಯ ಸಾಮಾಜಿಕ ಸತ್ಫಲವನ್ನು ಆಸ್ವಾದಿಸುವ ಸೌಭಾಗ್ಯ. ಪೂರ್ಣ ಅಮೃತ ಸಂಧಿಯು ದೊರಕೀತು.

ರಾಜಾಜಿಯವರು ತಿಳಿಸಿದಂತೆ, ಲೋಭ, ವಂಚನೆಗಳಿಂದ ದೂರವಾದ ಭೌತಿಕ ಪ್ರಗತಿಯು ನಮಗೆ ಬೇಕಿದ್ದರೆ ಉನ್ನತ ಆದರ್ಶ, ಉಚ್ಚ ಸಾಮಾಜಿಕ ಭಾವನೆಗಳು ಅಗತ್ಯವಾಗಿವೆ. ಭಗವದ್ಭಕ್ತಿಯಂತಹ ಸತ್ ಪ್ರಚೋದನೆಯಿಲ್ಲದೆ ಇಂತಹ ಗುರಿಯನ್ನು ಲಕ್ಷಿಸಲೂ, ಇಂತಹ ಭಾವನೆಯನ್ನು ಪಡೆಯಲೂ ಶಕ್ಯವಿಲ್ಲವೆಂಬುದು ವೈಜ್ಞಾನಿಕವೂ ಅನುಭವಿಕವೂ ಆದ ವಿಚಾರವಾಗಿದೆ. ಹೀಗೆ ಭಕ್ತಿಯು ಸಾಮಾಜಿಕ ಪ್ರಗತಿಯ ಜೀವರಸವಾಗಿರುವಾಗ ಅದರ ಪ್ರಸಾರದ ಬಗ್ಗೆ ಸರಿಯಾದ ಗಮನವಿಡುವುದು ಜನಾಂಗದ ಅವಶ್ಯ ಕರ್ತವ್ಯವಿದೆಯೆಂಬುದನ್ನು ಪುನರುಚ್ಚರಿಸಬೇಕಾಗಿಲ್ಲ.

ಜನರಲ್ಲಿ ಇಂತಹ ಪ್ರಭಾವ ಪರಿಣಾಮಗಳನ್ನು ನಿರ್ಮಿಸಲು ಭಗವತ್ ಭಕ್ತರ ಜೀವನವನ್ನು ಜನರ ಮುಂದಿಡುವುದು ಸುಲಭವೂ ಶಕ್ತವೂ ಆದ ಸಾಧನವೆಂದು ನಮ್ಮ ಅಭಿಪ್ರಾಯವಾಗಿದೆ. ಭಕ್ತರ ಜೀವನವು ಕೇವಲ ಸ್ವಾತ್ಮೋದ್ಧಾರ ದೃಷ್ಟಿಯಿಂದ ಪ್ರವರ್ತಿಸಲ್ಪಟ್ಟಿರದೆ ಜನರಲ್ಲಿ ಶುಭಪರಿಣಾಮವನ್ನು ಬೀರುವ ದೃಷ್ಟಿಯಿಂದಲೂ ಏರ್ಪಡಿಸಲ್ಪಟ್ಟಿದೆ. ಹೀಗಾಗಿ ಅವರ ಜೀವನದ ಚಿತ್ರವನ್ನು ಲೋಕದ ಹೃದಯಪುಟದಲ್ಲಿ ಚಿತ್ರಿಸಲು ಪ್ರಯತ್ನಿಸದಿದ್ದರೆ ಅವರ ಉದ್ದೇಶ ಸಾಧನೆಯಲ್ಲಿ ಮುಂದಿನ ಪೀಳಿಗೆಯು ತಾನು ವಹಿಸಬೇಕಾದ ಜವಾಬ್ದಾರಿಯನ್ನು ನಿರ್ವಹಿಸದ ಕರ್ತವ್ಯಲೋಪಕ್ಕೆ ಎರವಾಗಬೇಕಾಗುವುದು. ಈ ಕೊರತೆಯನ್ನು ನೀಗಿಸಲೆಂದೇ ಭಗವತ್ ಭಕ್ತರಾದ ಶ್ರೀ ಗೋವಿಂದದಾಸರ ಜೀವನ ಚರಿತ್ರೆಯನ್ನು ಜನರ ಮುಂದಿಡುವ ಸ್ತುತ್ಯ ಕಾರ್ಯವನ್ನು ಅವರ ಬಾಲ್ಯ ಸ್ನೇಹಿತರಾದ ಮತ್ತು ನಿವೃತ್ತ ಕನ್ನಡ ಅಧ್ಯಾಪಕರಾದ ಉಡುಪಿ ಅಂಬಲಪಾಡಿ ಶ್ರೀ ರಾಘವೇಂದ್ರ ಬಲ್ಲಾಳರು ಕೈಗೊಂಡಿರುವುದು ಪ್ರಶಂಸನೀಯವಾಗಿದೆ. ಅಲ್ಲದೆ ಈ ಕಾರ್ಯಕ್ಕೆ ಶ್ರಿದಾಸರವರ ಪುತ್ರರಾದ ಶ್ರೀ ಸೀತಾರಾಮರಾಯರು ನೆರವಾಗಿರುವುದು ಅವರ ಪಿತೃ ಭಕ್ತಿಯ ಅಪೂರ್ವ ಉದಾಹರಣೆಯೂ ಆಗಿದೆ.

ಶ್ರೀ ಗೋವಿಂದದಾಸರನ್ನು ನಾವು ನೋಡಿರಲಿಲ್ಲವಾದರೂ ಅವರ ಭಕ್ತಿಮಯ ಜೀವನದ ಬಗ್ಗೆ ಸಾಕಷ್ಟು ವಿಷಯಗಳನ್ನು ಕೇಳಿ ಸಂತೋಷಪಟ್ಟ

ರುವೆವು. ನಮ್ಮ ಸಂಸ್ಥಾನದ ಶಿಷ್ಯಪ್ರವರರಾದ ಶ್ರೀ ಗೋವಿಂದದಾಸರು ತಮ್ಮ ಜೀವಮಾನದಲ್ಲಿ ಭಕ್ತಿಯಿಂದ ಬಾಲಕೃಷ್ಣನನ್ನು ಒಲಿಸಲು ಸಫಲ ಪ್ರಯತ್ನವನ್ನು ನಡೆಸಿದವರಾಗಿದ್ದಾರೆ. ಸರಳರೂ, ಸದಾಚಾರಪರರೂ, ಶಾಂತಸ್ವಭಾವಿಗಳೂ ಆದ ಅವರು ಸುಖದಲ್ಲೂ, ದುಃಖದಲ್ಲೂ, ಸಂಪತ್ತಿನಲ್ಲೂ, ದಾರಿದ್ರ್ಯದಲ್ಲೂ, ನಿರ್ಲಿಪ್ತವಾದ ಶುದ್ಧ ಸಾಧುಜೀವನವನ್ನು ನಡೆಸಿರುವರು. ಭಕ್ತಿಭರದ ಭಗವತ್ ಕೀರ್ತನದಿಂದ ತಮ್ಮ ಜೀವನವನ್ನು ಪವಿತ್ರಗೊಳಿಸಿ ಶ್ರೀ ಬಾಲಗೋಪಾಲನ ವಿಶೇಷಪ್ರಸಾದಕ್ಕೆ ಪಾತ್ರರಾದ ಶ್ರೀ ಗೋವಿಂದದಾಸರ ಜೀವನಚರಿತ್ರೆಯಿಂದ ಜನರು ಪ್ರಭಾವಿತರಾಗಿ, ಈಶ್ವರ ಭಕ್ತಿ ಮತ್ತು ಆಸ್ತಿಕತೆಗಳು ಲೋಕದಲ್ಲಿ ವಿಶೇಷವಾಗಿ ಬೆಳಗಲಿ ಎಂದು ಆಶಿಸಿ, ಶ್ರೀ ಸೀತಾರಾಮರಾಯರಿಗೂ, ಅವರ ಸಹೋದರರಿಗೂ, ಅವರ ತೀರ್ಥರೂಪರ ಅಂತರ್ಯಾಮಿಯಾದ ಪರಮಾತ್ಮನ ಅನುಗ್ರಹ ಧಾರೆಯು ಹರಿಯುತ್ತಿರಲಿ ಎಂದು ದೇವರನ್ನು ಪ್ರಾರ್ಥಿಸಿ ಈ ಎರಡು ಮಾತುಗಳನ್ನು ಉಪರಮಿಸುವೆವು.

ಶ್ರೀ ಪೇಜಾವರಮಠ, ಉಡುಪಿ
೨೦—೧—೧೯೫೫

ಶ್ರೀ ವಿಶ್ವೇಶತೀರ್ಥ

ಗ್ರಂಥಕರ್ತನ ಆತ್ಮನಿವೇದನೆ

ಶ್ರೀ ಭಗವದೇಕಾಂತ ಭಕ್ತರೇ !

ಶ್ರೀರಮಾಬ್ರಹ್ಮಾದಿ ದೇವಾಧಿದೇವತೆಗಳಿಂದ ನೈವೇದ್ಯಗೊಂಬ ಶ್ರೀ ಪರಮಾತ್ಮನಿಗೆ ಮನುಷ್ಯಮಾತ್ರನಾದವನು ಅಲ್ಪವಸ್ತುಗಳನ್ನು ಅರ್ಪಿಸುವ ತೆರದಿಂದ "ವಿಹಾಯ ಕಾಮಾನ್ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ| ನಿರ್ಮಮೋ ನಿರಹಂಕಾರಃ" ಎಂಬ ಗೀತೋಕ್ತ ವಾಕ್ಯಕ್ಕೆ ತಕ್ಕಂತೆ, ನಿಸ್ಪೃಹತೆಯಿಂದ ಕಾಮ್ಯಕರ್ಮಗಳನ್ನು ಪರಿತ್ಯಜಿಸಿ, ನಿರ್ಮಮತೆ, ನಿರಹಂಕಾರತೆಯ ಮೂರ್ತಿಗೊಂಡು ಶಾಂತವೃತ್ತಿಯಿಂದ ಇದ್ದ ಪಾವನ ಸ್ವರೂಪರಾದ ಈ ಪೂಜ್ಯ ದಾಸರಾಯರಿಗೆ ನನ್ನ ಈ ಒಂದು ಚಿಕ್ಕ ಅಳಿಲು ಸೇವೆಯನ್ನು ಸಲ್ಲಿಸಬೇಕೆಂಬ ಸದಿಚ್ಛೆಯಿಂದ ಈ ಪುಟ್ಟ ಕೃತಿಯನ್ನು ರಚಿಸಿ ಅರ್ಪಿಸಿದ್ದೇನೆ.

ಶ್ರೀ ಪೇಜಾವರ ಮಠಾಧಿಪತಿಗಳಾದ ಶ್ರೀ ಶ್ರೀ ವಿಶ್ವಜ್ಞತೀರ್ಥ ಶ್ರೀಪಾದಂಗಳವರ ಪರ್ಯಾಯ ಅಖಂಡ ಎರಡು ವರ್ಷಗಳ ಕಾಲ ನಾನು ಶ್ರೀಗಳವರಲ್ಲಿ ಓದುತ್ತಿದ್ದ ವೇಳೆ, ಈ ಮಹಾನುಭಾವ ದಾಸರಾಯರ ಸಹವಾಸದ ಸುಯೋಗವು ನನಗೆ ದೊರೆತುದು ನನ್ನ ಪುಣ್ಯವಿಶೇಷವು.

ಆಗ ಅವರ ಪ್ರಭಾವಾತಿಶಯಗಳನ್ನು ಕಣ್ಣಾರೆ ಕಂಡದ್ದು, ಅವರಿಂದ ಕೆಲ ದೈವಿಕ ವಿಚಾರಗಳನ್ನು ಕಿವಿಯಾರೆ ಕೇಳಿದ್ದು ಅರಿತಿರುವೆನಾದುದರಿಂದ ಅವರ ಆಧ್ಯಾತ್ಮಿಕ ವಿಚಾರವನ್ನು ಚೆನ್ನಾಗಿ ಬಲ್ಲೆನೆಂಬ ಹೆಚ್ಚಳವೇ ಇದನ್ನು ಬರೆಯಲು ಧೈರ್ಯಗೊಳಿಸಿತು.

ಇವರ ಕರ್ಮ, ಧರ್ಮ, ತಪೋನುಷ್ಠಾನಾದಿ ಮಹಾಸದ್ಗುಣಗಳನ್ನು ಈಗ ಮನಸ್ಸಿಗೆ ತಂದುಕೊಂಡಾಗ ಮಾತ್ರ, ಬರೆಯಲು ಹೊರಟ ನನಗೆ "ಏರಾದ ಹಣ್ಣಿಗೆ ಕೈಚಾಚುವ ಕುಳ್ಳನಂತೆ" ಎಂಬ ಕಾಳಿದಾಸನ ಮಾತು ನೆನಪಿಗೆ ಬರುತ್ತದೆ.

ಸಾವಿರಾರು ಪುಟಗಳಲ್ಲಿ ತುಂಬಿಸಬಹುದಾದ ಈ ಪುಣ್ಯಶಾಲಿಗಳ ಕಾರ್ಯಕೌಶಲಗಳನ್ನು ಹತ್ತಾರು ಪುಟಗಳಲ್ಲಿ ಸಮಗ್ರ ತುಂಬುವುದೆಂದರೆ ಕೈಲಾಗದ

ಕೆಲಸವು ಎಂದರಿತಿರುವೆನಾದರೂ ಆ ಶುದ್ಧ ಜೀವನಚರಿತೆಯೆಂಬ ಹಾಲ್ಗಡಲಿನ ಕೆಲ ಅಮೃತಮಯಗಳಾದ ತುಂತುರುಗಳನ್ನಷ್ಟೇ ಎತ್ತಿ ಅವರ ದಯಾಬಲ ದಿಂದ ಸಂಗ್ರಹಿಸಿರುವೆನು.

"ಯನ್ನಾಮ ಶ್ರುತಮನುಕೀರ್ತಯೇದಕಸ್ಮಾತ್" ಎಂಬಂತೆ, ಕೇಳಿದ ಭಗವನ್ನಾಮಗಳನ್ನು ಸುಮ್ಮ ಸುಮ್ಮನೆ ಬಾಯಿಯಿಂದ ಪರರು ಹೇಳಿದಂತೆ ತಮಾಷೆಗಾಗಿ ಹೇಳಿದರೂ, ಅವಶಾತ್ ಕಾರಣವಿಲ್ಲದೆ ಉಚ್ಚರಿಸಿದರೂ, ದುಃಖ ಬಂದಾಗ ಅಯ್ಯೋ, ದೇವರೇ! ಎಂದಂದರೂ, ಜಾರಿಬಿದ್ದಾಗ ಅಯ್ಯಬ್ಬಾ, ಭಗವಂತಾ! ಎಂದು ಉಸುರಿದರೂ ಅದು ಅದಾಗಲೇ ಆ ಮನುಷ್ಯರ ಸಕಲದುರಿತ ರಾಶಿಯನ್ನೂ ನಾಶಗೊಳಿಸುತ್ತದೆ" ಎಂದು ಉದ್ದಾಮಗ್ರಂಥವಾದ ಶ್ರೀಮದ್ಭಾಗವತದ ಅಲ್ಲಲ್ಲಿ ಶ್ರೀ ಶುಕಮುನಿಗಳು ಸಾರುತ್ತಿದ್ದಾರೆ, ಎಂದಿರುವಾಗ ದಿನದ ನಡುರಾತ್ರಿ ಐದು ಘಂಟೆಯ ಕಾಲ ವನ್ನು ಮಾತ್ರ ಉಳಿದು ಮಿಕ್ಕ ಇಡೀ ದಿನದಲ್ಲಿ ಭಕ್ತಿಶ್ರದ್ಧೆಗಳಿಂದ ಮಾತ್ರ ಎಡೆ ಎಡೆ ಮೈಮರೆಯುತ್ತಾ, ಘಂಟಾಘೋಷವಾಗಿ ನಾಮರಾಶಿಗಳನ್ನು ಅಡಿಗಡಿಗೆ ಒದರುತ್ತಾ ಇರುವ ಈ ಪುಣ್ಯಪುರುಷರ ಮಾಹಾತ್ಮ್ಯೆಯನ್ನು ಕುರಿತು ಏನನ್ನಲಿ!

ಈ ಸಚ್ಚರಿತೆಗಳನ್ನು ಬರೆಯುವ ಸದ್ಯೋಗವನ್ನೂ, ಸಹಾಯ ಸಾಮಗ್ರಿ ಸಂಪತ್ತನ್ನೂ, ನನಗೆ ಕಲ್ಪಿಸಿಕೊಟ್ಟ "ಆತ್ಮಾ ವೈ ಪುತ್ರನಾಮಾಽಸಿ" ಎಂಬಂತೆ ತಮ್ಮ ತೀರ್ಥರೂಪರನ್ನೆ ಸರಿಬರಲಪೇಕ್ಷಿಸುವ ಅವರ ಚಿರಂಜೀವಿ ಗಳು ನನಗೆ ಸ್ತುತ್ಯರು.

"ಸದ್ಯಃ ಸಂಹರತೇ ಪಾಪಂ ಉತ್ತಮಶ್ಲೋಕ ವರ್ಣನಮ್" ಎಂಬ ಪುರಾಣವಾಕ್ಯದಂತೆ ಅನುತ್ತಮಯಶಸ್ಸಂಪನ್ನರಾದ ಪುಣ್ಯಪುರುಷ ಶ್ರೀಮಂತ ದಾಸರಾಯರ ಚರಿತ್ರೆಯು ನನ್ನ ಪಾಪಗಳನ್ನು ಕೊನೆಮಾಡದಿರದೆಂದು ನಂಬಿ ಇಷ್ಟಕ್ಕೆ ಉಪರಮಿಸಿದ್ದೇನೆ.

ಮನ್ಮಥ, ವೈಶಾಖ
ಶುದ್ಧ ಅಕ್ಷಯ
ತೃತೀಯಾ,

ಇಂತು ಭಗವದ್ಭಕ್ತರ ಪಾದಪದ್ಮ ಸೇವಕ,
ಪಂಡಿತ, **ಎನ್. ರಾಘವೇಂದ್ರ ಬಲ್ಲಾಳ,**
ವಿದ್ವಾನ್, ಉಡುಪಿ.

ಶ್ರೀ

ಭಕ್ತ ಗೋವಿಂದದಾಸರು

ಧರ್ಮವು ಕಲೆಗುಂದಿ ಅಧರ್ಮವು ತಲೆಯೆತ್ತಿದಾಗ ಧರ್ಮಸಂಸ್ಥಾಪನೆಗಾಗಿ ಪರಮಾತ್ಮನು ಅವತರಿಸಿರುವನು. ಜಗತ್ತಿನ ಇತಿಹಾಸದಲ್ಲಿ ಇದು ಎಲ್ಲೆಲ್ಲೂ ಕಾಣಬರುತ್ತದೆ. ಅದರಲ್ಲೂ ಭಾರತೀಯ ಇತಿಹಾಸವೇ ಧಾರ್ಮಿಕ ಹಿನ್ನೆಲೆಯಲ್ಲಿ ಜನ್ಮತಾಳಿದೆ. ಒಬ್ಬರಲ್ಲ, ಇಬ್ಬರಲ್ಲ, ಹಲವಾರು ವಿಭೂತಿ ಪುರುಷರು ಜನ್ಮತಾಳಿ ಭಾರತದ ಜ್ಞಾನದೀವಿಗೆಯನ್ನು ಜಗತ್ತಿನಲ್ಲೆಲ್ಲಾ ಬೆಳಗಿಸಿದ್ದಾರೆ. ರಾಮಕೃಷ್ಣರು ಅವತರಿಸಿದ ದೇಶದಲ್ಲಿ ಜ್ಞಾನಿಗಳು ಜನ್ಮತಾಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಂತಹ ಮಹಾನುಭಾವರ ಇತಿಹಾಸದಿಂದ ಜನತೆಯ ಅಜ್ಞಾನವು ದೂರವಾಗಿ ಜ್ಞಾನೋದಯವಾಗುವುದರಲ್ಲಿ ಸಂದೇಹವಿಲ್ಲ. ಆದರ್ಶ ಪುರುಷರ ನಡೆನುಡಿಗಳೇ ಮುಂದಿನ ಜನತೆಗೆ ಮಾರ್ಗದರ್ಶಕಗಳು. ಅದರಲ್ಲೂ ಐಹಿಕ ಸುಖಲೋಲುಪರಾಗಿ ಪಾರಮಾರ್ಥಿಕ, ಹಾಗೂ ದೈವಿಕ ವಿಚಾರಗಳಲ್ಲಿ ಶ್ರದ್ಧೆ ಇಲ್ಲದ ಜನರಿಗೆ ಇಂತಹ ಮಹಾವ್ಯಕ್ತಿಗಳ ಜೀವನ ಚರಿತ್ರೆಯು ಅದೆಷ್ಟು ಸಹಾಯಕವಾದೀತೆಂದು ಬೇರೆ ಹೇಳಬೇಕಾಗಿಲ್ಲ.

ಭಾರತದ ಪುಣ್ಯಕ್ಷೇತ್ರಗಳಲ್ಲಿ ಉಡುಪಿಯೂ ಒಂದು ಪ್ರಖ್ಯಾತ ಕ್ಷೇತ್ರವಾಗಿದೆ. ದ್ವೈತಮತ ಪ್ರತಿಷ್ಠಾಪಕರಾದ ಶ್ರೀ ಮಧ್ವಾಚಾರ್ಯರ ಜನ್ಮಭೂಮಿ ಉಡುಪಿ. ಆಸೇತು ಹಿಮಾಚಲ ಪರ್ಯಂತ ಭಕ್ತಜ್ಞಾನಿಗಳಿಂದ ಜನಜನಿತವಾದ ಶ್ರೀಕೃಷ್ಣನ ನಿಲಯ ಉಡುಪಿ. ಅಷ್ಟಮಠಗಳಿಂದ, ಅಖಿಲ ಭಾರತದಲ್ಲೇ ಶ್ರೇಷ್ಠತಮವೆಂದು ಪ್ರಸಿದ್ಧವಾದುದೂ ಉಡುಪಿ. ಇಂತಹ ಪುಣ್ಯಕ್ಷೇತ್ರಕ್ಕೆ ಸಂಬಂಧಿಸಿದ ಒಬ್ಬ ಮಹಾನುಭಾವರ ಜೀವನ ಚರಿತ್ರೆಯೇ ಈ ಲೇಖನದ ಜೀವಾಳ.

ಉಡುಪಿಯಿಂದ ಸುಮಾರು ಎಂಟು ಹರೆದಾರಿ ದೂರದಲ್ಲಿದೆ ಕುತ್ತೆತ್ತೂರೆಂಬ ಹಳ್ಳಿ. ಇಲ್ಲಿಯ ಜನರ ಮನೆಮಾತು ತುಳು, ಇದರಿಂದ ಇಲ್ಲಿಯ ಜನರನ್ನು

ತೌಳವರೆಂದು ಕರೆಯುತ್ತಿದ್ದರು. ಬ್ರಾಹ್ಮಣ್ಯಕ್ಕೂ ಬಡತನಕ್ಕೂ ನಿಕಟ ಸಂಬಂಧವಿದ್ದ ಕಾಲವದು. ಬಡತನದ ಮಡುವಿನಲ್ಲಿದ್ದ ಕಟಿಲ ಅನಂತಯ್ಯನವರ ಮನೆತನದಲ್ಲಿ ಶ್ರೀಗೋವಿಂದದಾಸರೆಂಬ ಭಗವದ್ಭಕ್ತರ ಜನ್ಮವಾಯಿತು. ಇವರ ಹೆಸರು ಗೋವಿಂದರಾಯರು. ಕ್ರಿ. ಶ. 1854 ನೇ ಆನಂದ ಸಂವತ್ಸರದಲ್ಲಿ ಜನ್ಮತಾಳಿದ ರಾಯರು ಸಚ್ಚಿದಾನಂದ ಭಕ್ತರಾದುದರಲ್ಲಿ ಸೋಜಿಗವೇನೂ ಇಲ್ಲ. ಗೋವಿಂದರಾಯರ ಭಕ್ತಿಮಾರ್ಗವು ಸರಕಾರಿ ನೌಕರಿಯಲ್ಲಿದ್ದ ಅಣ್ಣ ರಾಮಕೃಷ್ಣರಾಯರನ್ನು ತನ್ನ ಸಾಲಿಗೆ ಎಳೆದು ಕೊಂಡಿತು. ರಾಮಕೃಷ್ಣರಾಯರು ತಮ್ಮ ಸರಕಾರಿ ಉದ್ಯೋಗಕ್ಕೆ ತಿಲಾಂಜಲಿಕೊಟ್ಟು ತಮ್ಮನೊಂದಿಗೆ ಭಕ್ತಿ ಮಾರ್ಗವನ್ನು ಸೇರಿದರು. ಸೋದರರಿಬ್ಬರೂ ಪಾರಮಾರ್ಥಿಕದಲ್ಲಿ ಅಸಕ್ತರಾಗಿದ್ದು ಜ್ಞಾನಾರ್ಜನೆಗಾಗಿ ಉಡುಪಿಗೆ ಬಂದರು.

ಗೋವಿಂದರಾಯರು ಇನ್ನೂ ತಮ್ಮ ತಾರುಣ್ಯದ ಹೊಸ್ತಿಲನ್ನು ದಾಟಿರಲಿಲ್ಲ. ಆದರೂ ಇವರಲ್ಲಿ ದೈವಭಕ್ತಿಯು ತುಂಬಿತುಳುಕುತ್ತಿತ್ತು. ಚಿಕ್ಕಂದಿನಿಂದಲೇ ಇವರಿಗೆ ಪುರಂದರದಾಸರ ಹಾಡುಗಳೆಂದರೆ ಅತಿಮಮತೆ. ಸಾವಿರಾರು ಕೀರ್ತನೆಗಳನ್ನು ಕಂಠಸ್ಥಮಾಡಿಕೊಂಡು ಭಾವಪೂರ್ವಕವಾಗಿ ಹಾಡುತ್ತಿದ್ದರು. ದಾಸಗೀತೆಗಳಲ್ಲಿ ತನ್ಮಯರಾದ ರಾಯರು ಪುರಂದರದಾಸರನ್ನು ತಮ್ಮ ಮಾರ್ಗದರ್ಶಕರೆಂದೂ ಪರಮ ಗುರುಗಳೆಂದೂ ಭಾವಿಸಿದ್ದರು. ತನ್ನ ಸೋದರನ ಭಕ್ತಿವಿಶ್ವಾಸಗಳಿಗೆ ಮನಸೋತ ರಾಮಕೃಷ್ಣರಾಯರೂ ಭಕ್ತಿಮಾರ್ಗದಲ್ಲೇ ಸಾಗತೊಡಗಿದರು.

ರಾಯರು ದಾಸರಾದರು

ಉಡುಪಿಯ ಅಷ್ಟಮಠಗಳಲ್ಲಿ ಶ್ರೀಕೃಷ್ಣಾಪುರ ಮಠವೂ ಒಂದು. ಶ್ರೀವಿದ್ಯಾಧೀಶತೀರ್ಥ ಶ್ರೀಪಾದಂಗಳವರ ಕಾಲವದು. ಇವರು ಮಹಾತಪಸ್ವಿಗಳು. ಅಗಾಧ ಪಾಂಡಿತ್ಯದಿಂದ ಪ್ರಸಿದ್ಧಿಹೊಂದಿ ಅತ್ಯಂತ ಜನಪ್ರಿಯರಾಗಿದ್ದರು. ಶ್ರೀಪಾದಂಗಳವರಿಗೆ ಭಕ್ತಿಜ್ಞಾನಗಳಿಂದ ಬೆಳಗುತ್ತಿದ್ದ ಈ ಸೋದರರನ್ನು ನೋಡಿ ಹಿಡಿಯಲಾರದ ಆನಂದವಾಯಿತು. ಇವರ ಸದುದ್ದೇಶವು ಸಫಲವಾಗುವಂತೆ ಶ್ರೀಪಾದಂಗಳವರ ಅನುಗ್ರಹವೂ ದೊರಕಿತು.

ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರ ವಿದ್ಯಾ ಶಿಷ್ಯರು, ಶೀರೂರು ಮಠದ ಶ್ರೀಲಕ್ಷ್ಮೀವಲ್ಲಭತೀರ್ಥ ಶ್ರೀಪಾದಂಗಳವರು. ಇವರು ಮಹಾ ಮೇಧಾವಿಗಳೂ ವೇದವೇದಾಂತ ಕೋವಿದರೂ ಆಗಿದ್ದರು. ವಿದ್ಯಾವಿನಯ ಸಂಪನ್ನರಾದ ಜನರನ್ನು ಕಂಡರೆ ಇವರಿಗೆ ಅತಿಪ್ರೀತಿ. ಪರೋಪಕಾರ ಪರೋತ್ಕರ್ಷವೆಂದರೆ ತುಂಬಾ ತೃಪ್ತಿ. ಗೋವಿಂದರಾಯರ ಭಕ್ತಿ ಶ್ರದ್ಧೆ ಗಳನ್ನು ನೋಡಿ ಸಂತುಷ್ಟರಾದ ಶ್ರೀಪಾದಂಗಳವರು, ತಾವು ದಿನವೂ ಪೂಜಿಸುತ್ತಿದ್ದ ಮಾರುತಿ ಮೂರ್ತಿಯನ್ನು ತಮ್ಮ ವಾತ್ಸಲ್ಯದ ಕುರುಹಾಗಿ ಇವರಿಗೆ ದಯಪಾಲಿಸಿದರು. ಸದಾ ದೇವರ ಸೇವೆಯಲ್ಲೇ ನಿರತರಾದ ಗೋವಿಂದರಾಯರಿಗೆ ಅನ್ವರ್ಥವಾದ "**ದಾಸ**" ಎಂಬ ಬಿರುದನ್ನಿತ್ತು ಈ ಶ್ರೀಪಾದಂಗಳವರು ಅನುಗ್ರಹಿಸಿದರು. ಅಲ್ಲದೆ ತೀರ್ಥ ಯಾತ್ರೆ ಮಾಡು ವಾಗ ಇವರನ್ನು ಒಟ್ಟಿಗೆ ಕರೆದುಕೊಂಡು ಹೋಗಿ ದೇಶಸಂಚಾರದ ಅನುಭವ ವನ್ನು ಒದಗಿಸಿದರು. ಈ ಮೊದಲ್ಗೊಂಡು ಗೋವಿಂದರಾಯರನ್ನು ಜನರು "**ಗೋವಿಂದ ದಾಸ**" ಎಂದು ಕರೆಯಲಾರಂಭಿಸಿದರು. ಈ ಹೆಸರಿಗೆ ತಕ್ಕಂತೆ ಇವರು ಸರ್ವದಾ ಭಗವಂತನ ಸೇವೆಯಲ್ಲಿಯೇ ನಿರತರಾಗಿ ಭಜನೆ ನರ್ತನೆಗಳಿಂದ ಉಡುಪಿಯಲ್ಲಿ ಎಲ್ಲರ ಪ್ರೀತಿಗೆ ಪಾತ್ರರಾಗತೊಡಗಿದರು.

ಪುತ್ತಿಗೆ ಮಠದ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರಿಗೂ (ಈಗಿನ ಹಿರಿಯ ಶ್ರೀಪಾದಂಗಳವರು) ಗೋವಿಂದ ದಾಸರೆಂದರೆ ಅತಿಪ್ರೀತಿ.

ಗೋವಿಂದದಾಸರು ಕೇವಲ ಪುರಂದರದಾಸ, ಗೋಪಾಲದಾಸ, ವಿಜಯ ದಾಸರೇ ಮೊದಲಾದವರ ಗೀತೆಗಳಲ್ಲಿ ತೃಪ್ತರಾಗಿರಲಿಲ್ಲ. ವೇದಾಗಮಗಳನ್ನೂ ಶಾಸ್ತ್ರೀಯವಾಗಿ ಅಭ್ಯಾಸ ಮಾಡಬೇಕೆಂದು ದಾಸರಲ್ಲಿ ತುಂಬಾ ಆಸಕ್ತಿ ಇತ್ತು. ಇದಕ್ಕೆ ಅನುಕೂಲವಾಗಿ ಕಾಣೂರು ಮಠದ ಕೀರ್ತಿಶೇಷ ಶ್ರೀ ವಿದ್ಯಾನಿಧಿತೀರ್ಥ ಶ್ರೀಪಾದಂಗಳವರೂ, ಶ್ರೀ ಪೇಜಾವರ ಮಠದ ಶ್ರೀವಿಶ್ವಜ್ಞ ತೀರ್ಥ ಶ್ರೀಪಾದಂಗಳವರೂ, ಇವರಿಗೆ ಗುರುಗಳಾಗಿ ದೊರೆತರು. ಮಧ್ವ ಮತದ ಸಿದ್ಧಾಂತಗಳನ್ನು ಚೆನ್ನಾಗಿ ಇವರಿಂದ ಅಭ್ಯಾಸಮಾಡಿಕೊಂಡು ದಾಸರು ಮಧ್ವಶಾಸ್ತ್ರ ಸಂಪನ್ನರೂ ಆದರು. ಇದರಿಂದ ಉಡುಪಿಯ ಅಷ್ಟ

ಮಠದ ಯತಿಗಳೂ ಗೋವಿಂದದಾಸರನ್ನು ಪ್ರೀತಿಸುತ್ತಿದ್ದರಲ್ಲದೆ ಇವರಿಗೆ ತಮ್ಮ ಅಮೂಲ್ಯವಾದ ಜ್ಞಾನಭಂಡಾರವನ್ನೂ ಒದಗಿಸಿಕೊಟ್ಟರು. ಏನಿದ್ದರೂ ಭಕ್ತಿಮಾರ್ಗವೇ ಗೋವಿಂದದಾಸರ ಮಹಾ ಮಾರ್ಗವಾಗಿದ್ದಿತು. ಭಕ್ತಿಯೇ ಮುಕ್ತಿಯ ಸೋಪಾನವೆಂದು ಬಗೆದಿದ್ದ ಗೋವಿಂದದಾಸರು ನಿಜವಾಗಿಯೂ ಹರಿದಾಸರೆಂದರೆ ಅತಿಶಯವಿಲ್ಲ.

ದಾಸರ ಸದಾಚಾರ

ನಿತ್ಯಕರ್ಮಗಳೆಂದರೆ ದಾಸರಿಗೆ ಅತಿಶ್ರದ್ಧೆ. ಅರುಣೋದಯದಲ್ಲೇ ಎದ್ದು ಸ್ನಾನಮಾಡಿ ಅನುಷ್ಠಾನಗಳನ್ನು ಮುಗಿಸುತ್ತಿದ್ದರು. ಎಂತಹ ಚಳಿಯಿರಲಿ, ಮಳೆಯಿರಲಿ, ಮಧ್ವಸರೋವರಕ್ಕೆ ಹೋಗಿ ಸ್ನಾನಮಾಡುವುದು ದಾಸರ ನಿತ್ಯಕರ್ಮಗಳಲ್ಲಿ ಒಂದಾಗಿತ್ತು. ಪೂಜೆ ಮುಗಿದಮೇಲೆ ಹರಿಕಥಾಮೃತ ಸಾರ, ಭಗವದ್ಗೀತೆ, ದ್ವಾದಶ ಸ್ತೋತ್ರ, ವಿಷ್ಣು ಸಹಸ್ರನಾಮ, ರಾಘವೇಂದ್ರ ಸ್ತೋತ್ರ ಇತ್ಯಾದಿಗಳನ್ನು ಪಾರಾಯಣ ಮಾಡುತ್ತಿದ್ದರು. ಬಳಿಕ ಶ್ರೀಕೃಷ್ಣ ನಿಗೆ ನೂರಾರು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡುತ್ತಿದ್ದರು. ಆಮೇಲೆ ಪುರಂದರ ದಾಸರು, ವಿಜಯದಾಸರು, ಗೋಪಾಲದಾಸರು ಮೊದಲಾದವರ ಹಾಡುಗಳನ್ನೂ ಸುಳಾದಿಗಳನ್ನೂ ಹಾಡಿ, ನಲಿದು, ಭಕ್ತಿರಸದಲ್ಲಿ ಲೀನರಾ ಗುತ್ತಿದ್ದರು. ಇಷ್ಟಲ್ಲದೆ ಸದಾಚಾರ ಸ್ಮೃತಿಯಲ್ಲಿ ಹೇಳಿರುವ ಸಕಲವಿಧಿ ಗಳನ್ನೂ ಎಳ್ಳಷ್ಟೂ ಬಿಡದೆ ಅನುಸರಿಸುತ್ತಿದ್ದರು. "ಧ್ಯಾಯೇದ್ದೇವ ಮಹರ್ನಿಶಂ" ಎಂದು ಹಗಲಿರುಳೂ ದೇವರ ಧ್ಯಾನದಲ್ಲೇ ಮಗ್ನರಾಗಿದ್ದ ಇವರಿಗೆ ವಿರಾಮವೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ರಾತ್ರಿ ೧೧ ರಿಂದ ಪ್ರಾತಃಕಾಲ ೪ ಘಂಟೆಯ ತನಕ ಮಾತ್ರ ವಿಶ್ರಾಂತಿ ಪಡೆಯು ತ್ತಿದ್ದರು. ಇವರಿಗೆ ತಮ್ಮ ೨೪ ನೇ ವಯಸ್ಸಿನಲ್ಲೇ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಬೇಕೆಂಬ ಅಭಿಲಾಷೆ ಹುಟ್ಟಿತು. ಅಣ್ಣ ರಾಮಕೃಷ್ಣರಾಯರೂ ತಮ್ಮನ ಇಚ್ಛೆಗೆ ಅನುಗುಣವಾಗಿ ತೀರ್ಥಯಾತ್ರೆಗೆ ಮುಂದಾದರು.

ದಾಸರ ತೀರ್ಥಯಾತ್ರೆ

ಸೋದಾ ಕ್ಷೇತ್ರವೆಂದರೆ ಅತ್ಯಂತ ಪುಣ್ಯಸ್ಥಳವಾಗಿದೆ. ಇಲ್ಲಿಯೇ ಶ್ರೀವಾದಿರಾಜತೀರ್ಥ ಶ್ರೀಪಾದಂಗಳವರು ವೃಂದಾವನಸ್ಥರಾಗಿರುವರು. ಈ ಪುಣ್ಯಕ್ಷೇತ್ರವೇ ಗೋವಿಂದದಾಸರಿಗೆ ತೀರ್ಥಯಾತ್ರೆಯ ಮಹಾಪುಣ್ಯವನ್ನು ಮೊದಲಾಗಿ ದೊರಕಿಸಿತು. ಅಲ್ಲಿಂದ ತುಂಗಭದ್ರಾ, ಮಂತ್ರಾಲಯ, ಶ್ರೀರಂಗ, ಕಂಚಿ, ಮಧುರೆ, ರಾಮೇಶ್ವರ, ಅನಂತಶಯನ, ಕನ್ಯಾಕುಮಾರಿ, ತಿರುಚಂದೂರು ಮೊದಲಾದ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಕೊನೆಗೆ ಮದರಾಸಿನ ತಿರುವಲ್ಲಿಕೇಣಿಯಲ್ಲಿರುವ ಪಾರ್ಥಸಾರಥಿ ದೇವಾಲಯಕ್ಕೆ ಬಂದು ತಲಪಿದರು. ಕ್ರಿ. ಶ. ೮ನೇ ಶತಮಾನಕ್ಕೆ ಸೇರಿದ ಪಲ್ಲವರ ಕಾಲದ ಈ ಪ್ರಾಚೀನದೇವಾಲಯದ ಪಾರ್ಥಸಾರಥಿಸ್ವರೂಪಿಯಾದ ಶ್ರೀಕೃಷ್ಣನೇ ಈ ತರುಣ ಯಾತ್ರಿಕರ ಮನಸ್ಸನ್ನೆಳೆದು ಮಧುಕರವೃತ್ತಿಯಿಂದ ಜೀವಿಸುವಂತೆ ಪ್ರೇರಣೆಮಾಡಿದ ನೆಂದರೆ ತಪ್ಪಾಗಲಾರದು.

ಇಂದು ನಿಜವಾಗಿಯೂ ಗೋವಿಂದದಾಸರು ಒಬ್ಬ ವೈಷ್ಣವ ಶಿರೋಮಣಿಯಾಗಿ ಬೆಳಗಿದರು. ಕೊರಳಿಗೆ ತುಳಸೀಮಣಿ, ಕಮಲಾಕ್ಷಿಮಣಿಗಳ ಹಾರ, ಭುಜದ್ವಯದಲ್ಲಿ ಶಂಖ ಚಕ್ರಾದಿ ಚಿನ್ಹೆಗಳು, ಹಣೆಯಲ್ಲಿ ಊರ್ಧ್ವಪುಂಡ್ರ, ಶ್ರೀ ರಾಜರ ಮೃತ್ತಿಕೆ, ಎಡಹೆಗಲಿನಲ್ಲಿ ನೇತಾಡುವ ಜೋಳಿಗೆ, ತಲೆಗೆ ಕಾವಿ ಶಾಟಿಯ ಮುಸುಕು, ಅದರಮೇಲೆ ಬಹಿರ್ವಾಸದ ಸುತ್ತು, ಷಟ್ಪುಚ್ಛವಾಗಿ ಉಟ್ಟಧೋತರ, ಅದರಮೇಲೆ ಜಟ್ಟಿಯಾಗಿ ಬಿಗಿದ ಅಂಗವಸ್ತ್ರ, ತುಳಸೀಮಾಲೆಯಿಂದ ಅಲಂಕೃತವಾದ ತಂಬೂರಿ, ಅದನ್ನು ಎಡಭುಜದಮೇಲೆ ಆನಿಸಿ ಹಿಡಿದು ಬಲಗೈಯಿಂದ ಮೀಟುವನಾದಕ್ಕೆ ಎಡಗೈಯಿಂದ ಹೊಡೆಯುವ ತಾಳ, ಇವುಗಳ ಹಿಮ್ಮೇಳದಿಂದ ಹಾಡುವ ದೇವರನಾಮುಗಳ ಸುಮಧುರಗಾನ—ಇವು ಈ ಭಕ್ತ ಸಹೋದರರನ್ನು ಎಲ್ಲರೂ ಕಣ್ಣೆತ್ತಿ ನೋಡುವಂತೆ ಮಾಡಿದ್ದವು. ಅಣ್ಣ ತಮ್ಮಂದಿರು ಅವಳಿಜವಳಿಗಳಂತೆ ಕಾಣಿಸುತ್ತಿದ್ದರು. ಇವರು ತಾಳಬದ್ಧವಾಗಿ ಗತಿಗೆ ತಕ್ಕಂತೆ ಮೆಲ್ಲಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಸಾಗುತ್ತಿರುವುದನ್ನು ನೋಡಿ ಮನದಣಿಯದವರಿಲ್ಲ. ಆಬಾಲವೃದ್ಧರೂ ಈ ದಾಸ ದ್ವಂದದ ದೇವರನಾಮ ಸಂಕೀರ್ತನೆಗೆ ತಲೆದೂಗಿ

ಇವರಿಗೆ ಗೌರವ ಕೊಟ್ಟು ದಾರಿಬಿಡುತ್ತಿದ್ದರು. ಇವರ ಭಕ್ತಿ, ನಿಷ್ಕಪಟತೆಗಳಿಗೆ ಮೆಚ್ಚಿ ಅಕ್ಕಿ, ಬೇಳೆ, ಹಾಲು, ತುಪ್ಪ, ದುಡ್ಡು, ದುಗ್ಗಾಣಿಗಳನ್ನಿತ್ತು ಸತ್ಕರಿಸುತ್ತಿದ್ದರು. ಒಮ್ಮೆ ದೇವಾಲಯವನ್ನು ಸುತ್ತಿಬಂದರೆ ಇಬ್ಬರ ಜೋಳಿಗೆಗಳು ತುಂಬಿದಂತೆ ಭಿಕ್ಷೆ ನೀಡಿದವರ ಹೃದಯವೂ ಸಂತೋಷದಿಂದ ತುಂಬುತ್ತಿತ್ತು.

ದಾಸರ ಮಧುಕರ ವೃತ್ತಿ

ಶ್ರೀದಾಸರು ದಿನವೂ ತಾವು ಭಿಕ್ಷೆಯೆತ್ತಿ ತಂದುದನ್ನು ಸರಿಯಾಗಿ ಎರಡು ಪಾಲುಮಾಡುತ್ತಿದ್ದರು. ಅವುಗಳಲ್ಲಿ ಒಂದನ್ನು ತಮ್ಮ ಬಿಡಾರದ ಮುಂದೆ ಕಾಯುತ್ತಿದ್ದ ಬಡವರಿಗೆ ಭಿಕ್ಷೆಯಿತ್ತು ಉಳಿದುದನ್ನು ತಾವೇ ಅಡಿಗೆ ಮಾಡಿ ದಿನಕ್ಕೆ ಹತ್ತು ಹನ್ನೆರಡು ಮಂದಿ ಬ್ರಾಹ್ಮಣರಿಗೆ ಸಂತರ್ಪಣೆ ಮಾಡುತ್ತಿದ್ದರು. ಉಳಿದ ಅನ್ನವನ್ನು ಆರು ಮುದ್ದೆಗಳನ್ನಾಗಿ ಮಾಡಿಕೊಂಡು ತಾವು ಉಪಯೋಗಿಸುತ್ತಿದ್ದರು. ಹೀಗೆ ಎರಡು ವರುಷಗಳ ಕಾಲ ಮದರಾಸಿನ ಪಾರ್ಥಸಾರಥಿಯ ಸನ್ನಿಧಿಯಲ್ಲಿ ದಾಸರು ತಮ್ಮ ಅಣ್ಣನೊಡನೆ ದೇವರಸೇವೆ ಮಾಡಿ ತಮ್ಮ ಭಕ್ತಿಯ ಪ್ರಭಾವವನ್ನು ಅಲ್ಲಿಯ ಜನರಿಗೆ ಬೀರಿ ತಮ್ಮ ಮಧುಕರ ವೃತ್ತಿವ್ರತವನ್ನು ಶ್ರೀಕೃಷ್ಣನಿಗೆ ಅರ್ಪಿಸಿ ಅಲ್ಲಿಂದ ತಿರುಪತಿಗೆ ಹೋದರು.

ಶ್ರೀದಾಸರಿಗೆ ಪದ್ಮಾವತೀಕಲ್ಯಾಣ ಕಥೆಯನ್ನು ಆಖ್ಯಾನ ಉಪಾಖ್ಯಾನಗಳೊಡನೆ ಹೇಳುವುದರಲ್ಲಿ ತುಂಬಾ ನೈಪುಣ್ಯವಿತ್ತು. ಶ್ರೀನಿವಾಸನ ಸನ್ನಿಧಿಯಲ್ಲಿ ಪದ್ಮಾವತೀಕಲ್ಯಾಣ ಕಥೆಯನ್ನು ಸಂಪೂರ್ಣ ಅನುವಾದ ಮಾಡಿ ಸೋದರರಿಬ್ಬರೂ ದೇವರ ಅನುಗ್ರಹಕ್ಕೂ ಜನರ ಪ್ರೀತಿಗೂ ಪಾತ್ರರಾದರು.

ಇನ್ನು ಕಾಶಿಗೆ ಹೋಗಬೇಕೆಂದು ನಿಶ್ಚಯಿಸುವಷ್ಟರಲ್ಲೇ ಪ್ರಾಣೇಶವಿಠ್ಠಲ ದಾಸರನ್ನು ಭೇಟಿಯಾಗಬೇಕೆಂಬ ಆಸೆಯಿಂದ ಶಿವಮೊಗ್ಗದ ಸಮೀಪದ ಹಳ್ಳಿಗೆ ನಡೆದರು. ಪ್ರಾಣೇಶವಿಠ್ಠಲದಾಸರ ಮಹಿಮೆಯನ್ನು ಕೇಳಿದ್ದ ದಾಸರಿಗೆ ಇವರ ಅನುಗ್ರಹ ಪಡೆಯದೆ ಕಾಶಿಗೆ ತೆರಳುವ ಉತ್ಸಾಹವಿದ್ದಿಲ್ಲ.

ಅಣ್ಣ ರಾಮಕೃಷ್ಣರಾಯರು ತಮ್ಮನ ಮನೋಗತವನ್ನು ವಿಠ್ಠಲದಾಸರಿಗೆ ತಿಳಿಸಿದಾಗ ದಾಸರು ಇನ್ನೂ ಬ್ರಹ್ಮಚಾರಿಗಳೆಂಬುದನ್ನು ಅರಿತು ಚಕಿತರಾಗಿ ದಾಸರನ್ನು ಗೃಹಸ್ಥಾಶ್ರಮಿಗಳಾಗಬೇಕೆಂದು ಉಪದೇಶಿಸುವಂತೆ ಅಣ್ಣ ರಾಮಕೃಷ್ಣ ರಾಯರಿಗೆ ಹೇಳಿದರು. ಏಕೆಂದರೆ ದಾಸರ ಮುಖಭಾವವು ಅವರ ಉಜ್ಜ್ವಲ ಭವಿಷ್ಯವನ್ನು ಸೂಚಿಸುತ್ತಿತ್ತು. ಇವರಿಂದ ಜನತೆಗೆ ಉಪಕಾರವಾಗಬಹುದೆಂದು ಕಾಣುತ್ತಿತ್ತು. ಇದರಿಂದಲೇ ಪ್ರಾಣೇಶವಿಠ್ಠಲ ದಾಸರು—'ಗೃಹಸ್ಥನು ಲೋಕೋಪಕಾರಿ; ಎಲ್ಲಾ ಆಶ್ರಮಗಳಿಗೂ ಗೃಹಸ್ಥಾಶ್ರಮವು ಆಶ್ರಯ ಕೊಡತಕ್ಕ ಆಶ್ರಮ; ಸುಖದುಃಖಗಳ ಅನುಭವಕ್ಕೆ ಗೃಹಸ್ಥಾಶ್ರಮವೇ ಯೋಗ್ಯವಾದುದು; ಈ ಆಶ್ರಮದಲ್ಲಿದ್ದು—

"ಈಸಬೇಕು ಇದ್ದು ಜೈಸಬೇಕು
ಹೇಸಿಕೆಯ ಸಂಸಾರದಲ್ಲಿ ಆಶೆ ಲೇಶ ಇಡದ್ಹಾಂಗೆ—
ಈಸಬೇಕು ಇದ್ದು ಜೈಸಬೇಕು" ಎಂಬಂತೆ

ಸಂಸಾರಸಾಗರದಲ್ಲಿ ಈಜಾಡಿ ತೀರವನ್ನು ಹೊಂದಬೇಕು. ಅನುರಾಗದಿಂದ ಬರುವ ವೈರಾಗ್ಯವು ಪ್ರಶಸ್ತವಾದುದು. ಹಸಿಯಾದ ಕಟ್ಟಿಗೆಯನ್ನು ಎಷ್ಟು ತೀಡಿದರೂ ಅದರಲ್ಲಿ ಬೆಂಕಿ ಹುಟ್ಟದು. ಅನುರಾಗವು ಆರಿದಾಗಲೇ ಜ್ಞಾನಾಗ್ನಿಯು ಪ್ರಜ್ವಲಿಸುವುದು. ಇದರಿಂದ ರಾಗಮಯವಾದ ಸಂಸಾರ ಸಾಗರದಲ್ಲಿ ಮಾನವನು ಗೈಯುವ ಯಾತ್ರಯೇ ನಿಜವಾದ ಯಾತ್ರೆ' ಇತ್ಯಾದಿ ಸದುಪದೇಶಗಳಿಂದ ಶ್ರೀ ಪ್ರಾಣೇಶವಿಠ್ಠಲ ದಾಸರು ಈ ತರುಣ ಭಕ್ತರ ಮನಸ್ಸಿನಲ್ಲಿ ಅದ್ಭುತ ಪರಿಣಾಮಕ್ಕೆ ಅವಕಾಶವಿತ್ತರು.

ಕೆಲವು ದಿನಗಳ ಮೇಲೆ ಶ್ರೀ ಗೋವಿಂದ ದಾಸರು ತಮ್ಮ ಅಣ್ಣನವರೊಡನೆ ಪ್ರಾಣೇಶವಿಠ್ಠಲದಾಸರ ಆಶೀರ್ವಾದವನ್ನು ಶಿರಸಾವಹಿಸಿ ಉಡುಪಿಗೆ ಬಂದರು. ಶ್ರೀಕೃಷ್ಣನ ಸನ್ನಿಧಿಯಲ್ಲಿ ತಮ್ಮ ಭಕ್ತಿಯ ಕಾಣಿಕೆಯನ್ನು ಅರ್ಪಿಸಿ ಮಾತೆಯ ಅನುಗ್ರಹಕ್ಕಾಗಿ ಹುಟ್ಟೂರಿಗೆ ತೆರಳಿದರು.

ಶ್ರೀದಾಸರು ಮಾತೆಯನ್ನು ತನ್ನ ಜೀವನದಾತೆಯಾದ ಪ್ರಥಮ ದೇವತೆಯೆಂದೇ ತಿಳಿದಿದ್ದರು. ಮಾತೆಯ ಮಾತೆಂದರೆ ಇವರಿಗೆ ವೇದವಾಕ್ಯ. ೩೦ ವರುಷದ ತನ್ನ ಮಗ ಇನ್ನೂ ಅವಿವಾಹಿತನಾಗಿರುವುದು ಏನೆಂದರೂ ತಾಯಿಗೆ ಸಂತೋಷವಿರದು. ಶ್ರೀ ಪ್ರಾಣೇಶವಿಠ್ಠಲದಾಸರ ಉಪದೇಶದಿಂದ ತನ್ನ ಹೃದಯದಲ್ಲಾದ ಪರಿಣಾಮ, ಮಾತೆಯ ಮನೋಗತ ಇವು ಮುಪ್ಪುರಿಗೊಂಡು ಶ್ರೀದಾಸರನ್ನು ಗೃಹಸ್ಥಾಶ್ರಮಕ್ಕೆ ಕಾಲಿಡುವಂತೆ ಪ್ರೇರೇಪಿಸಿದುವು.

ದಾಸರ ಗೃಹಸ್ಥಾಶ್ರಮ

ಇನ್ನೂ ಮೂವತ್ತು ವರುಷದ ತಾರುಣ್ಯ; ಅಘಟಿತ ಘಟನೆಯೆಂಬಂತೆ ಇವರಿಗೆ ದೊರತ ಕನ್ಯೆಯೂ ಶಾಸ್ತ್ರಮರ್ಯಾದೆಯಂತೆ ದ್ವಾದಶ ವರ್ಷದವಳು.

" ತ್ರಿಂಶದ್ವರ್ಷೋದ್ವಹೇತ್ ಕನ್ಯಾಂ ಹೃದ್ಯಾಂ ದ್ವಾದಶ ವಾರ್ಷಿಕೀಂ "

ಎಂಬ ಮನುವಿನ ಮಾತು ದಾಸರ ವಿಷಯದಲ್ಲಿ ಸರಿಯಾಗಿ ಅನ್ವಯಿಸಿತು. ದಾಸರ ಹೆಸರು ಗೋವಿಂದ ಎಂದಿದ್ದರೆ ಪತ್ನಿಯ ಹೆಸರು ಗಂಗೆ. ಒಂದು ಮಹತ್ವವನ್ನು ಸೂಚಿಸಿದರೆ ಇನ್ನೊಂದು ಪಾವನತೆಯನ್ನು ಸೂಚಿಸುತ್ತದೆ. ಹೀಗೆ ಗೋವಿಂದದಾಸರೂ ಗಂಗಾಬಾಯಮ್ಮನವರೊ ಮಹತ್ವ ಪಾವನತೆಗಳ ಪ್ರತೀಕವೂ ಎಂಬಂತೆ ಅನ್ಯೋನ್ಯವಾಗಿ ಸಂಸಾರ ರಥದ ಎರಡು ಗಾಲಿಗಳಂತೆ ಸಾಗುತ್ತಿದ್ದರು. ಗೋವಿಂದದಾಸರ ವೈಷ್ಣವ ಭಕ್ತಿಯ ಪ್ರವಾಹದಲ್ಲಿ ಗಂಗಾಬಾಯಿಯವರ ಪತಿಭಕ್ತಿಯ ವಾಹಿನಿಯು ಸಂಗಮವಾಗಿ ಸಂಸಾರವನ್ನೇ ಭಕ್ತಿಯ ಸಾಗರದಲ್ಲಿ ತೇಲಾಡಿಸುತ್ತಿತ್ತು. ಬಟತನದ ಕಷ್ಟಗಳು ದೈವಭಕ್ತಿಯ ಪ್ರವಾಹದಲ್ಲಿ ನುಚ್ಚುನೂರಾಗುತ್ತಿದ್ದುವು. ಪತಿಯ ಮನೋಗತವನ್ನು ಅರಿತು ಅವರ ಆಶ್ರಮ ಧರ್ಮಕ್ಕೆ ಚ್ಯುತಿಬಾರದಂತೆ ಕಾಲಕ್ಕೆ ಸರಿಯಾಗಿ ವಿನಯ ಸೌಜನ್ಯಗಳಿಂದ ಪತಿಶುಶ್ರೂಷೆಯಲ್ಲಿ ತತ್ಪರೆಯಾದ ಗಂಗಾಬಾಯಿಯವರು ನಿಜವಾಗಿಯೂ " ಸಹಧರ್ಮಿಣಿ " ಎಂಬ ಹೆಸರಿಗೆ ತಕ್ಕವರಾಗಿದ್ದರು.

ದಾಸರು ಬಾಲ್ಯದಿಂದಲೇ ಭಕ್ತಿಮಾರ್ಗದಲ್ಲಿ ನಿರತರಾಗಿದ್ದುದರಿಂದ ಇವರು ಸಂಸಾರಿಗಳಾದರೂ ತಾವರೆ ಎಲೆಯು ನೀರಿನಲ್ಲಿದ್ದಂತೆ ಸಂಸಾರದ ಲೇಪ

ಅಂಟದವರಾಗಿ ಭಾಗವತಧರ್ಮ ಕರ್ಮಾಚರಣೆಗಳಲ್ಲೇ ಆಸಕ್ತರಾಗಿದ್ದರು. ಇದರಿಂದ ಸಂಸಾರದ ಮಾಯಾಜಾಲದಲ್ಲಿ ಇವರು ಸಿಲುಕಿ ಇತರರಂತೆ ನೊಂದು ಬೆಂಡಾಗಲಿಲ್ಲ. ಉಡುಪಿಯ ಅಷ್ಟಮಠದ ಯತಿಗಳೆಲ್ಲಾ ದಾಸರಲ್ಲಿ ತುಂಬಾ ವಾತ್ಸಲ್ಯವುಳ್ಳವರಾಗಿದ್ದುದರಿಂದ ಉಡುಪಿಯಲ್ಲಿರುವುದೆಂದರೆ ಇವರಿಗೆ ಸ್ವರ್ಗವಾಸದಂತೆ ತೋರುತ್ತಿತ್ತು. ಉಡುಪಿಯ ಶ್ರೀಗಳವರೊಡನೆ ಪಾರಮಾರ್ಥಿಕ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಾ ಜಪ ಪೂಜೆ ಇತ್ಯಾದಿ ಕರ್ಮಗಳಲ್ಲಿ ಕಾಲ ಕಳೆಯುವುದೆಂದರೆ ದಾಸರಿಗೆ ಅತ್ಯಾಸಕ್ತಿ.

ಎಲ್ಲೆಲ್ಲಿಯೂ ಮಾನ್ಯಗೃಹಸ್ಥರು ದಾಸರನ್ನು ಬಹುಮಾನಿಸುತ್ತಿದ್ದರು. ಇವರ ಆತ್ಮೀಯರಲ್ಲಿ ಅನೇಕ ಆಢ್ಯ ಮಹನೀಯರೂ ಸೇರಿದ್ದರು. ಇವರಲ್ಲಿ ಮುಖ್ಯರಾದ ಕೆಲವರ ಹೆಸರನ್ನು ಸೂಚಿಸುವುದಾದರೆ ಮಂಗಳೂರಿನ ಸುಪ್ರಸಿದ್ಧವ್ಯಾಪಾರಿಗಳೂ, ಶ್ರೀಮಂತರೂ ಆಗಿದ್ದ ಕೀರ್ತಿಶೇಷ ನೆಲ್ಲಿಕಾಯಿ ಗುಂಡೂರಾಯರು, ನೆಲ್ಲಿಕಾಯಿ ಶ್ರೀನಿವಾಸರಾಯರು, ಮುನ್ಸಿಫ್ ತುಪಾಕಿ ಸುಬ್ಬಣ್ಣಾಚಾರ್ಯರು, ಶ್ರೀ ಕೃಷ್ಣಾಪುರ ಮಠದ ಸರ್ವಾಧ್ಯಕ್ಷ ಪಾರುಪತ್ಯಗಾರರಾದ ಶ್ರೀ ಕುಂಜಿಬೆಟ್ಟು ವೆಂಕಟಕೃಷ್ಣಾಚಾರ್ಯರು, ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ಆರಣಿ ಸುಬ್ಬರಾಯರು, ಮೈಸೂರಿನ ಅಟ್ಟಾಜಿ ವೆಂಕಟರಾಯರು, ಶ್ರೀ ಕುಂಜೂರು ವ್ಯಾಸರಾಯರು, ಶ್ರೀ ಪಾವಂಜೆ ಗೋಪಾಲಕೃಷ್ಣಯ್ಯನವರು, ಪಾವಂಜೆ ಶ್ರೀ ಗುರುರಾಯರು ಮೊದಲಾದ ವೈದಿಕ ಲೌಕಿಕ ಸನ್ಮಿತ್ರರ ಹೆಸರನ್ನು ನೆನಸದೆ ಇರಲು ಸಾಧ್ಯವಿಲ್ಲ. ಇವರೆಲ್ಲಾ ದಾಸರನ್ನು ತಮ್ಮ ಬಳಗದವರಂತೆಯೇ ಆದರಿಸುತ್ತಿದ್ದರು. ಹೀಗೆಯೇ ವಿದ್ಯಾಭಿಮಾನಿಗಳಾದ ಅನೇಕ ಶ್ರೀಮಂತರು ದಾಸರನ್ನು ಕರೆದು ಅವರಿಂದ ಪುರಂದರದಾಸರೇ ಮೊದಲಾದವರ ಕೀರ್ತನೆಗಳನ್ನು ಕೇಳಿ ಅವರ ಭಕ್ತಿರಸದಲ್ಲಿ ತಾವೂ ಭಾಗಿಗಳಾಗಿ ದಾಸರಿಗೆ ಶಾಲು ಧೋತ್ರಗಳಲ್ಲದೆ ಧನರೂಪದಲ್ಲಿಯೂ ಸಂಭಾವನೆ ಇತ್ತು ಗೌರವಿಸುತ್ತಿದ್ದರು.

ದಾಸರ ಆರ್ಥಿಕಪರಿಸ್ಥಿತಿ

ಧಾರ್ಮಿಕ ಸಂಪತ್ತಿನಿಂದ ಗೋವಿಂದದಾಸರು ತುಂಬಿತುಳುಕುತ್ತಿದ್ದರೂ, ಆರ್ಥಿಕ ದೃಷ್ಟಿಯಿಂದ ಅಷ್ಟೇನೂ ಹೊಗಳಿಸಿಕೊಳ್ಳುವಷ್ಟು ಸಿರಿವಂತರಲ್ಲ.

ಇದ್ದ ಪಿತ್ರಾರ್ಜಿತವಾದ ಆಸ್ತಿಗೂ ಐದು ಮಂದಿ ಸಹೋದರರಲ್ಲಿ ತಾನೂ ಒಬ್ಬ. ಇಂದಿನಂತೆ ಹಿಸೆಗಾಗಿ ವ್ಯಾಜ್ಯಗಳಿಲ್ಲದ ಕಾಲವದು. ಆಸ್ತಿಪಾಸ್ತಿಗಳ ವಿಭಾಗ, ವಧೂವರರ ಜೋಡಿ, ಇತ್ಯಾದಿ ಎಲ್ಲಾ ವಿಷಯಗಳಲ್ಲೂ ದೇವರಿಗೇ ಶರಣು ಹೋಗುವುದು ಎಷ್ಟೋ ಮನೆತನಗಳಲ್ಲಿ ರೂಢಿಯಾಗಿದ್ದ ಕಾಲ. ದಾಸರ ಆಸ್ತಿಯ ವಿಭಾಗಕ್ಕೂ ಇದೇ ರೀತಿಯನ್ನು ಅನ್ವಯಿಸಲಾಗಿತ್ತು. ದೇವರ ಮುಂದೆ ಚೀಟಿ ಬರೆದಿಟ್ಟು ಪೂಜಿಸಿ ಅದನ್ನು ಚಿಕ್ಕ ಮಕ್ಕಳಿಂದ ಎತ್ತಿಸಿದಾಗ ಹಿರಿಯರ ಕುತ್ತೆತ್ತೂರು ಮನೆಯೇ ದಾಸರ ಪಾಲಿಗೆ ಬಂತು. ಪಾಲಿಗೆ ಬಂದುದು ಮೇಲೋಗರವೆಂಬಂತೆ ದಾಸರು ತೃಪ್ತರಾಗಿ ತನ್ನ ಸಂಸಾರದ ಭಾರವನ್ನೆಲ್ಲಾ ಭಗವಂತನ ಮೇಲೆ ಹೊರಿಸಿ ತನ್ನದತ್ತಸ್ವಾತಂತ್ರ್ಯಕ್ಕೆ ತಕ್ಕಂತೆ ಯಾವ ಲೋಪವೂ ಇಲ್ಲದೆ ಸಾತ್ವಿಕ ಜೀವಿಗಳೆನಿಸಿ ಸದಾಚಾರ ಸಂಪನ್ನರಾಗಿ ಗೃಹಸ್ಥರಲ್ಲಿ ವಿರಕ್ತ, ವಿರಕ್ತರಲ್ಲಿ ಗೃಹಸ್ಥ ಎಂಬಂತೆ ಸಕಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಅಣ್ಣ ರಾಮಕೃಷ್ಣರಾಯರು ವಿಭಾಗವಾದರೂ ತಮ್ಮ ಗೋವಿಂದ ದಾಸರನ್ನು ಬಿಟ್ಟರಲಿಲ್ಲ. ಒಟ್ಟಗೇ ಉಂಡು ಒಂದೇ ಬುದ್ಧಿಯಿಂದ ಜೀವನ ಸಾಗಿಸುತ್ತಿದ್ದರು. ಆದುದರಿಂದ ಗೋವಿಂದದಾಸರಿಗೆ ಗೃಹಕೃತ್ಯದ ಭಾರವು ಸ್ವಲ್ಪ ಕಡಿಮೆಯಾಗಿತ್ತು. ಉಡುಪಿಗೆ ಬಂದು ತನ್ನ ಭಕ್ತಿ ಸದಾಚಾರಗಳಲ್ಲಿ ನಿರತರಾಗಲು ಅವಕಾಶ ಸಿಗುತ್ತಿತ್ತು. ಶ್ರೀಕೃಷ್ಣ ಸನ್ನಿಧಿಯಲ್ಲಿ ಸತ್ಕರ್ಮದಿಂದ ಕಾಲ ಕಳೆಯಲು ಯಾವ ಅಡ್ಡಿಯೂ ಆಗುತ್ತಿರಲಿಲ್ಲ.

ಕಳ್ಳತನಕ್ಕೆ ಪ್ರಾಯಶ್ಚಿತ್ತ

ದೈವಬಲವಿದ್ದವರಿಗೆ ಯಾವ ಭಯವೂ ಇಲ್ಲ. ಮುರಹರನ ದಾಸರನ್ನು ಯಮನೂ ಮುಟ್ಟುವುದಿಲ್ಲವೆಂಬ ಪ್ರತೀತಿ ಇದೆ. ಸಂಸಾರಿಗಳಾದ ಮೇಲೆ ಅದರ ಹಿಂದೆಯೇ ಅನೇಕ ಲಾಭ ನಷ್ಟಗಳೂ ಬಾರದೆ ಇಲ್ಲ. ಕಾರಣವಿಲ್ಲದೆ ಕಾರ್ಯವಿಲ್ಲ. ಆದರೆ ಮಹಾಮಹಿಮರ ಕೆಲವು ಕಾರ್ಯಗಳಿಗೆ ರೂಢಿಯಲ್ಲಿರುವ ಕಾರಣಗಳು ಕಾರಣಗಳಾಗಿಲ್ಲದಾಗ ದೈವಶಕ್ತಿ, ಅಮಾನುಷ ಪ್ರಭಾವ

ವೆಂದು ಕೊಂಡಾಡುತ್ತೇವೆ. ಇಂತಹ ಆಶ್ಚರ್ಯಕರವಾದ ಘಟನೆಗಳಲ್ಲಿ ಒಂದೆರಡನ್ನು ಹೇಳದಿದ್ದರೆ ಅದೊಂದು ಲೋಪವೆನ್ನಿಸಬಹುದು. ದಾಸರ ಜೀವನದಲ್ಲಿ ಇಂತಹ ಘಟನೆಗಳು ಅನೇಕವಿವೆ. ಈ ಘಟನೆಗಳಲ್ಲಿ ದಾಸರ ಒಕ್ಕಲೊಬ್ಬ ತೆಂಗಿನಕಾಯಿ ಕದ್ದುದು ತುಂಬಾ ಸ್ವಾರಸ್ಯವಾಗಿದೆ. ದಾಸರ ಪತ್ನಿ ಗಂಗಾಬಾಯಿಯವರು ತೆಂಗಿನಕಾಯಿ ಕದ್ದೋಡುತ್ತಿದ್ದ ಒಕ್ಕಲು ಹುಡುಗನನ್ನು ಕಣ್ಣಾರೆ ಕಂಡಿದ್ದರು. ಕೇಳಿದಾಗ ಹುಡುಗ ಎದುರು ಮಾತನಾಡಿ ಒಡತಿಯನ್ನೇ ಗದರಿಸಿಬಿಟ್ಟನು. ಇದರಿಂದ ಅಮ್ಮನವರಿಗೆ ತುಂಬಾ ಬೇಸರವಾಯಿತು. ದಾಸರ ಕಿವಿಗೂ ಈ ಸುದ್ದಿ ತಲುಪಿತು. ತನ್ನ ತೋಟದ ತೆಂಗಿನಕಾಯಿಯನ್ನು ಕದಿಯುವುದಲ್ಲದೆ ಹೆಂಗಸರನ್ನು ಗದರಿಸಿ ಮಾತಾಡುವುದೆಂದರೆ ಹುಡುಗನ ಎಳೆಯ ಬುದ್ಧಿಯೆಂದು ದಾಸರು ನೊಂದುಕೊಂಡರು. ಅದೇ ದಿನ ರಾತ್ರಿ ಎಂದಿನಂತೆ ಭಜನೆಗೆ ಆರಂಭಿಸಿ ಶತ್ರುಗಳನ್ನು ಶಿಕ್ಷಿಸಿ ಮಿತ್ರರನ್ನಾಗಿ ಮಾಡಬೇಕೆಂದು ದೇವರನ್ನು ವಿಶೇಷವಾಗಿ ಹಾಡುಗಳಿಂದ ಬೇಡಿಕೊಂಡರು.

ಒಂದು ವಾರದೊಳಗೆ ಕದ್ದ ಒಕ್ಕಲಿಗನ ಮನೆಗೆ ಊರಲ್ಲಿಲ್ಲದ ಸಿಡುಬಿನ ಗಾಳಿ ಬೀಸಿತು. ಸಂಪ್ರದಾಯದಂತೆ ಅವನ ಮನೆಯವರು ಜೋಯಿಸರ ಬಳಿಹೋಗಿ ಈ ಮಾರಿ ರೋಗದ ಹಾವಳಿಯ ಕಾರಣವನ್ನು ಕೇಳಿದರು. ಬ್ರಾಹ್ಮಣಾವಮಾನವಲ್ಲದೆ ಬೇರೆಯಾವ ಕಾರಣವೂ ಇಲ್ಲವೆಂದು ಜೋಯಿಸರು ಹೇಳಿದರು. ಮನೆಯಲ್ಲಿ ವಿಚಾರಿಸಿದಾಗ ಹುಡುಗನ ತಂದೆಗೆ ತನ್ನ ಮಗನ ದುರ್ನಡತೆಯು ತಿಳಿಯಿತು. ದಾಸರ ಮನೆಗೆ ಹೋಗಿ ಆವನು ಅವರನ್ನು ಬಗೆಬಗೆಯಿಂದ ಕ್ಷಮಿಸುವಂತೆ ಬೇಡಿದನು.

ಸಾತ್ವಿಕ ಗುಣಗಳ ತವರುಮನೆ ಎನಿಸಿದ ದಾಸರ ಹೃದಯ ತನ್ನ ವೈರಿಗಳ ಬಗ್ಗೆಯೂ ಕರಗಿ ನೀರಾಗುವ ಸ್ವಭಾವವುಳ್ಳದ್ದು. ದಾಸರು 'ಅಪ್ಪಾ, ನನ್ನಮುಂದೆ ಅತ್ತು ಬೇಡಿದರೆ ಫಲವೇನು ? ದೇವರನ್ನು ಬೇಡಿದರೆ ನಿನ್ನ ಅಭೀಷ್ಟವು ನೆರವೇರುವುದರಲ್ಲಿ ಸಂಶಯವಿಲ್ಲ. ಧರ್ಮ, ನ್ಯಾಯ, ನೀತಿಗಳನ್ನು ನಾಶ ಮಾಡಿದರೆ ಅವೇ ನಮ್ಮನ್ನೂ ನಾಶಮಾಡುವುವು' ಎಂದು

ಉದಾತ್ತವಾಗಿ ನುಡಿದರು. ಒಕ್ಕಲಿಗನು ಹಿಂತೆರಳುವಾಗಲೇ ಮನೆಯಲ್ಲಿ ಒಂದು ಬಗೆಯ ಶಾಂತಿಯುಪಸರಿಸಿತ್ತು. ಓಡಿ ಬಂದ ಮಾರಿ ಓಡಿಯೇ ಹೋಯಿತು. ರೋಗಕ್ಕೆ ತುತ್ತಾದವರಲ್ಲಿ ಒಬ್ಬನಿಗಲ್ಲದೆ ಇನ್ನಾರಿಗೂ ಹಾನಿಯಾಗಲಿಲ್ಲ.

ಭ್ರಾತೃ ವಿಯೋಗ

ಕೆಲವು ಕಾಲ ದಾಸರು ಹೀಗೆಯೇ ಊರಲ್ಲೆಲ್ಲಾ ಗಣ್ಯರಾದ ಎಲ್ಲರ ಆದರ ಗೌರವಗಳಿಗೆ ಪಾತ್ರರಾಗಿದ್ದರು. ಇತರರ ಸುಖವೇ ತಮ್ಮ ಸುಖವೆಂದು ಭಾವಿಸುತ್ತಿದ್ದರು. ಇಷ್ಟರಲ್ಲಿ ಇವರ ಅಣ್ಣ ರಾಮಕೃಷ್ಣರಾಯರು ವ್ಯಾಧಿಪೀಡಿತರಾದರು. ಅಣ್ಣನವರು ಉಡುಪಿಯಲ್ಲಿದ್ದರೆ ತಕ್ಕ ಶುಶ್ರೂಷೆ ಅವರಿಗೆ ದೊರೆಯದೆಂದು ಅವರನ್ನು ಊರಿಗೆ ಕರೆತಂದರು. ರಾಮಕೃಷ್ಣರಾಯರು ತುಂಬ ನಿಷ್ಠಾವಂತರು. ವ್ರತೋಪವಾಸಗಳನ್ನು ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದವರು; ಸಾತ್ವಿಕಗುಣಸಂಪನ್ನರು. ಆತ್ಮಶಕ್ತಿಯು ಹೆಚ್ಚಿದಂತೆ ಇವರ ಶಾರೀರಕ ಶಕ್ತಿಯು ದಿನೇದಿನೇ ಕ್ಷೀಣವಾಗತೊಡಗಿತು. ಉಪಚಾರ, ಚಿಕಿತ್ಸೆ, ಔಷಧಗಳು ಹೆಚ್ಚಿನ ಪರಿಣಾಮಕಾರಿಗಳಾಗಲಿಲ್ಲ. ಒಂದು ದಿನ ಮುಂಜಾನೆ ಹೊತ್ತು ರಾಮಕೃಷ್ಣರಾಯರಿಗೆ ತಮ್ಮ ಜೀವನಯಾತ್ರೆಯನ್ನು ಮುಗಿಸುವ ವೇಳೆಯು ಸಮಿಾಪಿಸಿದೆಯೆಂದು ಅರಿವಾಗಿದ್ದಿತು. ಅಣ್ಣನ ಜೀವಿತವೇ ಸರ್ವಸ್ವವೆಂದು ಮಮತೆಯಿಂದ ಕಾಣುತ್ತಿದ್ದ ತನ್ನ ಸಹೋದರನನ್ನು ಹತ್ತಿರ ಕರೆದು “ತಮ್ಮಾ, ನನ್ನ ದಿನ ಮುಗಿಯುತ್ತಾ ಬರುತ್ತಿದೆ. ಇನ್ನು ನೀನೊಬ್ಬನೇ ಸಾಗಬೇಕಾಗಿದೆ; ಜಾಗ್ರತೆ; ನಿನಗೆ ಉತ್ತರೋತ್ತರ ಶ್ರೇಯಸ್ಸಾಗಲಿ.” ಎಂದು ದಾಸರ ತಲೆಯ ಮೇಲೆ ತಮ್ಮ ಅಮೃತ ಹಸ್ತವನ್ನಿಟ್ಟು ಹರಸಿದರು. ತಾವು ಶ್ರದ್ಧೆಯಿಂದ ಹಸ್ತಪ್ರತಿ ಮಾಡಿಟ್ಟಿದ್ದ ದೇವರ ನಾಮದ ಪುಸ್ತಕಗಳ ಭಂಡಾರವನ್ನೇ ಅವರಿಗೆ ಒಪ್ಪಿಸಿದರು. ಇಷ್ಟರಲ್ಲಿ ತಲೆಯ ಮೇಲಿಟ್ಟ ಕೈ ತಾನಾಗಿಯೇ ಕೆಳಗಿಳಿಯಿತು. ರಾಮಕೃಷ್ಣರಾಯರು ಈ ಲೋಕವನ್ನು ತ್ಯಜಿಸಿ ಉತ್ತಮ ಲೋಕವನ್ನು ಹೊಂದಿದರು. ಪುತ್ರಸಂತತಿ ಇಲ್ಲದ ರಾಮಕೃಷ್ಣರಾಯರಿಗೆ ದಾಸರು ಸಾಂಗೋಪಾಂಗವಾಗಿ ಉತ್ತರ

ಕ್ರಿಯೆಗಳನ್ನು ನೆರವೇರಿಸಿದರು. ಶ್ರೀದಾಸರು ನಿಸ್ಸಹಾಯುರಾದರೂ, ಅವರು ಧೈರ್ಯಶಾಲಿಗಳೂ, ನಿಷ್ಕಾಮ ಜೀವಿಗಳೂ ಆದ್ದರಿಂದ ಬಡತನವನ್ನೇ ಸಿರಿತನವೆಂದು ತಿಳಿದಿದ್ದರು.

ದಾಸಾಗ್ರೇಸರ

ಕನಕದಾಸನ ಹೆಸರನ್ನು ಕೇಳದವರು ವಿರಳ. ಉಡುಪಿಯಲ್ಲಿ ಕನಕದಾಸನಿಗೆ ಶ್ರೀಕೃಷ್ಣನು ಒಲಿದುದರ ಕುರುಹಾಗಿ “ಕನಕನ ಕಂಡಿ” ಎಂಬ ಗವಾಕ್ಷವನ್ನು ಇಂದೂ ಕಾಣಬಹುದು. ಭಕ್ತರಲ್ಲಿ ಭಕ್ತನಾಗಿ, ದಾಸರಲ್ಲಿ ದಾಸನೆಂದರೆ ಕನಕದಾಸ ಸಮಾಜಿಕವಾದ ಜಾತಿಮತಗಳಿಗಿಂತಲೂ ಮಾನಸಿಕ ಪರಿಶುದ್ಧತೆಯೇ ದೇವರ ಒಲುಮೆಗೆ ತಳಹದಿ ಎಂಬುದಕ್ಕೆ ಕನಕದಾಸರ ಕಡೆಗೆ ಕೈ ತೋರಿಸಬೇಕು. ಆಡಂಬರ ಡಂಭಾಚಾರಗಳಿಲ್ಲದೆ ಸಾತ್ವಿಕಭಾವನೆಯಿಂದ ಕೂಡಿ ವಿನಯಸೌಜನ್ಯಗಳ ವಾಹಿನಿಯಲ್ಲಿ ಮಿಲನವಾದ ಭಕ್ತಿಯೇ ಭಕ್ತರ ಕೈದೀವಿಗೆ, ಎಂಬುದಕ್ಕೆ ಗೋವಿಂದದಾಸರ ಕಡೆಗೆ ಬೆರಳೆತ್ತಿ ತೋರಿಸಬೇಕು. ಭಕ್ತನ ಮೇಲೆ ದೇವರನ್ನು ಒಲಿಸುವ ಸಾಹಸಕ್ಕೆ ಕೈಹಾಕಿದವರಲ್ಲಿ ಗೋವಿಂದ ದಾಸರೂ ಒಬ್ಬರು. ಭಗವಂತನನ್ನು ಒಲಿಸುವುದೊಂದೇ ದಾಸರ ಮುಖ್ಯಧ್ಯೇಯವಾಗಿದ್ದಿತು. ಕಾಲಿಗೆ ಕಿರುಗೆಜ್ಜೆಗಳನ್ನು ಕಟ್ಟಿ ತಾಳ ತಂಬೂರಿಗಳನ್ನು ಹಿಡಿದು ಭಕ್ತಿರಸದ ಮಹಾ ಸಾಗರದಲ್ಲಿ ನಲಿದಾಡುತ್ತಿರುವ ದಾಸರನ್ನು ಕಂಡರೆ ಮಾನವ ಜೀವನದಲ್ಲಿ ದೇವರ ಒಲುಮೆಗಿಂತ ಬೇರಾವ ಹಿರಿಮೆಯೂ ಇಲ್ಲವೆಂದು ಭಾಸವಾಗುತ್ತಿದ್ದಿತು.

‘ಕಷ್ಟಪಡದೆ ಸುಖ ಬರದು’ ಎಂಬುದೇ ದಾಸರ ಧೋರಣೆಯಾಗಿದ್ದಿತು. ತುಂಬಿದ ಸಂಸಾರ, ಮನೆತುಂಬ ಮಕ್ಕಳುಮರಿಗಳಿಂದು ದಾಸರಿಗೆ ಇತರರ ದೃಷ್ಟಿಯಿಂದ ಕಷ್ಟವೆನ್ನು ವಂತಿದ್ದಿತು. ದೈವಶಕ್ತಿಯನ್ನು ಚೆನ್ನಾಗಿ ತಿಳಿದು ಪ್ರಪಂಚದ ಸಾರಾಸಾರತೆಯನ್ನು ಮನಗಂಡ ದಾಸರು ಎಲ್ಲವನ್ನೂ ದೇವರ ಮೇಲೆ ಹೊರಿಸಿ “ಮಧ್ವೇಶಾ ನಮ್ಮಪ್ಪಾ, ತಂದೆಯೇ, ಕಾಪಾಡು” ಎಂಬ ದ್ವಾದಶಾಕ್ಷರಿಯನ್ನು ಮಾತುಮಾತಿಗೆ ಜಪಿಸುತ್ತಿದ್ದರು. ಈ ಮಂತ್ರದ

ಪ್ರಭಾವವೋ ಎಂಬಂತೆ ಬಡತನವೇ ದಾಸರಿಗೆ ಸಿರಿತನದಂತೆ ಕಾಣುತ್ತಿದ್ದಿತು. ಎಷ್ಟು ಕಷ್ಟವಿದ್ದರೂ ಜ್ಞಾನಸಂಪತ್ತಿಗಿಂತ ಮಿಗಿಲಾದ ಸಂಪತ್ತೇ ಇಲ್ಲವೆಂದು ದಾಸರು ಸಂಪೂರ್ಣವಾಗಿ ತಿಳಿದಿದ್ದರು. ಇದರಿಂದ ಅರೆಹೊಟ್ಟೆ ಉಂಡಾದರೂ ತಮ್ಮ ಮಕ್ಕಳನ್ನು ಓದಿಸಬೇಕೆಂಬ ದೃಢ ನಿರ್ಧಾರಕ್ಕೆ ಬಂದಿದ್ದರು. ಯಾವ ತಂದೆಯು ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಿಲ್ಲವೋ ಅವನು ಶತ್ರುವಿಗೆ ಸಮಾನನು ಎಂದೇ ದಾಸರ ಅಭಿಪ್ರಾಯವಾಗಿದ್ದಿತು. ಬಡತನದ ಸೌಕರ್ಯಗಳಿಗೆ ತಕ್ಕಂತೆ ಮಕ್ಕಳೆಲ್ಲರಿಗೂ ವಿದ್ಯಾಭ್ಯಾಸ ಒದಗಿಸುತ್ತಿದ್ದರು.

ಪುತ್ರ ಸಂಪತ್ತು

ಶ್ರೀದಾಸರಿಗೆ ತಮ್ಮ ಸಂಸಾರದ ಭಾರವನ್ನು ಕಡಿಮೆ ಮಾಡಿಕೊಂಡು ಭಗವತ್ಸೇವೆಯಲ್ಲೇ ನಿರತರಾಗಲು ತುಂಬ ಅವಕಾಶವು ಒದಗಿದ್ದಿತು. ಅವರು ಕಲಿಸಿದ ಸದ್ವಿದ್ಯೆಯ ಪ್ರಭಾವದಿಂದಲೂ ಅವರ ಭಗವದ್ಭಕ್ತಿಯ ಮಹಿಮೆಯಿಂದಲೂ ಅವರ ಮಕ್ಕಳೆಲ್ಲರೂ ಪ್ರಪಂಚವ್ಯವಹಾರದಲ್ಲಿ ಚೆನ್ನಾಗಿ ನುರಿತವರಾದರು. ಜನ್ಮಭೂಮಿಯು ದಕ್ಷಿಣಕನ್ನಡವಾದರೂ ಶ್ರೀದಾಸರ ಪುತ್ರರಿಗೆ ಮೈಸೂರೇ ತಮ್ಮ ಕಾರ್ಯಕ್ಷೇತ್ರವಾಗಿದ್ದಿತು. ಮೈಸೂರಿನಲ್ಲಿ ಶ್ರೀದಾಸರ ಮಕ್ಕಳೆಂದರೆ ಎಲ್ಲರಿಗೂ ಆದರ. ಇವರ ವ್ಯವಹಾರ ನಿಪುಣತೆಯು ಅನೇಕ ಆಢ್ಯ ಮಹನೀಯರ ಮನಸ್ಸನ್ನು ಆಕರ್ಷಿಸುತ್ತಿದ್ದಿತು. ಶ್ರೀದಾಸರಿಗೆ ಪಾರಮಾರ್ಥಿಕ ಸಂಪತ್ತನ್ನು ಒದಗಿಸಿದ ಭಗವಂತನು ಇವರ ಮಕ್ಕಳಿಗೆ ಲೌಕಿಕ ಸೌಭಾಗ್ಯವನ್ನು ಕರುಣಿಸಿದುದರಲ್ಲಿ ಆಶ್ಚರ್ಯವಿಲ್ಲ. ಮೈಸೂರಿನ ಗಣ್ಯವ್ಯಕ್ತಿಗಳಿಗೆಲ್ಲಾ ಶ್ರೀದಾಸರ ಮಕ್ಕಳ ಮೇಲೆ ಒಂದು ಬಗೆಯ ಪ್ರೀತಿ ಹುಟ್ಟತೊಡಗಿತು. ಮೈಸೂರಿನ ಅರಮನೆಯವರಿಗೂ ಶ್ರೀದಾಸರ ಮಕ್ಕಳು ಆತ್ಮೀಯರಾಗಿ ವಿಶ್ವಾಸಪಾತ್ರರಾದರು.

ಸಾಲಿಗ್ರಾಮದ ಪುನರಾಗಮನ

ಒಮ್ಮೆ ಶ್ರೀದಾಸರು ತಮ್ಮ ಮಕ್ಕಳೊಡನೆ ಮೈಸೂರಿನಲ್ಲಿದ್ದಾಗ ನಡೆದ ಘಟನೆಯು ಇವರ ದೃಢವಿಶ್ವಾಸ, ಹಾಗೂ ಅಚಲ ಭಕ್ತಿಗೆ ನಿದರ್ಶನವಾಗಬಹುದು. ಮೈಸೂರಿನ ಜಗನ್ಮೋಹನ ಪ್ರಾಸಾದ ನಿಜವಾಗಿಯೂ ಜಗ

ನ್ಮೋಹಕವಾದ ಭವ್ಯಕಟ್ಟಡ. ಇದರ ಇದಿರಿಗೆ ಲಕ್ಷ್ಮೀನಿವಾಸ ಅಗ್ರಹಾರ. ಇಲ್ಲಿಯೇ ಶ್ರೀದಾಸರು ತಮ್ಮ ಮಕ್ಕಳೊಂದಿಗೆ ಕೆಲವು ಸಮಯ ವಾಸಮಾಡು ತ್ತಿದ್ದರು. ಜಗನ್ಮೋಹನಪ್ರಾಸಾದದ ಪ್ರಾಂಗಣದಲ್ಲಿ ಒಂದು ಅಶ್ವತ್ಥಮರವಿದೆ. ಇದರ ಕಟ್ಟೆಯಲ್ಲಿ ನಾಗರಕಲ್ಲುಗಳ ಸಾಲುಗಳಿವೆ. ಸುಬ್ರಹ್ಮಣ್ಯಷಷ್ಠೀ ಎಂದರೆ ನಾಗಪೂಜೆಗೆ ಪ್ರಸಿದ್ಧವಾದ ದಿನ. ಶ್ರೀದಾಸರ ಮಕ್ಕಳಲ್ಲಿ ಕಿರಿಯ ಮಗನ ಹೆಸರು ರಾಮಕೃಷ್ಣ. ಇವನು ನಾಗಪೂಜೆಗೆ ಹೋಗುತ್ತಾ ಶ್ರೀದಾಸರ ಸಾಲಿಗ್ರಾಮ ಸಂಪುಟವನ್ನು ಕೊಂಡೊಯ್ದನು. ಇದು ಲಕ್ಷ್ಮೀನಾರಾಯಣ ಸಾಲಿಗ್ರಾಮವಾಗಿದ್ದಿತಲ್ಲದೆ ದಾಸರು ಇದನ್ನು ೬೦ ವರ್ಷಗಳಿಂದ ಆರಾಧಿಸಿ ಕೊಂಡು ಬಂದಿದ್ದರು. ರಾಮಕೃಷ್ಣನು ಪೂಜೆ ತೀರಿಸಿಬರುವಾಗ ಅಪೂರ್ವ ವಾದ ಸಾಲಿಗ್ರಾಮವನ್ನು ಸಂಪುಟಸಹಿತ ಮರೆತು ಬಂದನೆಂದರೆ ಶ್ರೀದಾಸ ರಿಗೆ ಹೇಗಾಗ ಬಹುದೆಂದು ನಾವೇ ಊಹಿಸಬಹುದು.

ದಾಸರು ಸಾಲಿಗ್ರಾಮವು ದೊರೆಯದೆ ತಾನು ಊಟಮಾಡುವುದಿಲ್ಲ. ಶ್ರೀ ಲಕ್ಷ್ಮೀನಾರಾಯಣನಿಗೆ ನೈವೇದ್ಯಮಾಡಿಯೇ ನಾನು ಪ್ರಸಾದ ಸ್ವೀಕರಿಸುವು ದೆಂದು ದೃಢಚಿತ್ತದಿಂದ ದೇವರ ಮುಂದೆ ಉಪವಾಸ ಕುಳಿತರು. ದಾಸರು ಉಪವಾಸವಿದ್ದಾರೆ, ಸಾಲಿಗ್ರಾಮ ದೊರೆಯದೆ ಉಣ್ಣುವುದಿಲ್ಲವಂತೆ, ಎಂಬ ಸುದ್ದಿ ಅಗ್ರಹಾರದಲ್ಲೆಲ್ಲಾ ಹಬ್ಬಿತು. ಸಾಲಿಗ್ರಾಮವನ್ನು ಒಯ್ದ ಹುಡುಗನ ತಂದೆತಾಯಿಗಳಿಗೂ ಈ ಸುದ್ದಿ ತಿಳಿಯಿತು. ಒಡನೆಯೇ ಆ ಹುಡುಗನ ತಂದೆ ತನ್ನ ಮಗನಿಗೆ ಸಿಕ್ಕಿದ ಸಾಲಿಗ್ರಾಮವೇ ಅದಾಗಿರಬೇಕೆಂದು ಎಣಿಸಿ ರಂಗಣ್ಣ ನೆಂಬ ವಕೀಲ ಗುಮಾಸ್ತನೊಂದಿಗೆ ಶ್ರೀದಾಸರಿದ್ದಲ್ಲಿಗೆ ಓಡಿಬಂದನು. ಎರಡು ಸೇರು ಅಕ್ಕಿ ಮತ್ತು ಎರಡು ತೆಂಗಿನಕಾಯಿ ಸಮೇತ ಸಾಲಿಗ್ರಾಮದ ಸಂಪುಟ ವನ್ನು ಇಟ್ಟು ಅವರಿಗೆ ದಂಡಪ್ರಣಾಮ ಮಾಡಿದನು. ಶ್ರೀದಾಸರು ಆ ಬ್ರಾಹ್ಮಣನ ಪ್ರಾಮಾಣಿಕತೆಗೆ ಮೆಚ್ಚಿ ಅತನು ತಂದ ತೆಂಗಿನಕಾಯಿಗಳನ್ನು ಒಡೆದು ದೇವರಿಗೆ ಸಮರ್ಪಿಸಿ ಪ್ರಸಾದ ಕೊಟ್ಟು ಹರಸಿದರು. ದಾಸರೂ ಆನಂದ ತುಂದಿಲರಾಗಿ ಕ್ರಮದಂತೆ ಪೂಜೆ ಮುಗಿಸಿ ದೇವರ ಪ್ರಸಾದವನ್ನು ಸ್ವೀಕರಿಸಿ ಭಗವಂತನ ಮಹಿಮೆಯನ್ನು ತಮ್ಮಲ್ಲೇ ಕೊಂಡಾಡಿದರು. ಆಗ ಸೂರ್ಯಾಸ್ತಮಯಕ್ಕೆ ಹೆಚ್ಚುಕಾಲವಿದ್ದಿರಲಿಲ್ಲ. ಸಾಲಿಗ್ರಾಮ ತಂದ

ಬ್ರಾಹ್ಮಣನು ತಾನು ಎಂತಹ ದೋಷಕ್ಕೆ ಗುರಿಯಾಗಬೇಕಾಗಿದ್ದಿತು, ದಾಸರ ಆಮರಣ ಉಪವಾಸಕ್ಕೂ ತಾನೇ ಕಾರಣನಾಗುತ್ತಿದ್ದೆನಲ್ಲಾ, ಎಂದು ಮನದಲ್ಲಿಯೇ ನೆನೆದು ತಾನು ಸಾಲಿಗ್ರಾಮವನ್ನು ತಿರುಗಿ ಶ್ರೀದಾಸರಿಗೆ ಅರ್ಪಿಸಿದ್ದು ಮಹಾಭಾಗ್ಯವೆಂದು ಸಂತೋಷಪಟ್ಟನು.

ಗೋವಿಂದ ಭವನ

ದಾಸರು ಸಕಲ ಸೌಭಾಗ್ಯದಿಂದ ತುಂಬಿತುಳುಕುತ್ತಿದ್ದಾರೆ. ಒಂದೆಡೆ ತಮ್ಮ ಮಕ್ಕಳು ವಿದ್ಯಾವಿನಯಸಂಪನ್ನರಾಗಿ ಸೌಭಾಗ್ಯಶಾಲಿಗಳಾಗಿದ್ದಾರೆ ಎಂಬ ಆನಂದ, ಇನ್ನೊಂದೆಡೆ ತನ್ನ ಅಚಲ ಭಕ್ತಿವಿಶ್ವಾಸಗಳು ಇಂತಹ ಅನುಕೂಲಗಳನ್ನು ಒದಗಿಸಿವೆಯಲ್ಲದೆ ಎಲ್ಲಕ್ಕೂ ಭಗವಂತನೇ ಕಾರಣನು ಎಂಬ ಸಂತೋಷ. ಇಂತಹ ಸಂತೋಷ ಸಂಪತ್ತುಗಳಿಗೆ ಸರಿಯಾದ ಒಂದು ಭವ್ಯವಾದ ವಸತಿಯು ಅಭ್ಯಾಗತರ ಸತ್ಕಾರಕ್ಕೆ ಬಂಧುಬಾಂಧವರ ಒಡನಾಟಕ್ಕೆ ಬೇಕೇಬೇಕೆಂದು ದಾಸರಿಗೆ ಇಚ್ಛೆಯಾಯಿತು. ಬ್ರಾಹ್ಮಣಾರಾಧನೆ ಅತಿಥಿ ಸತ್ಕಾರ ಇತ್ಯಾದಿಗಳಿಗೆ ಅನುಕೂಲವಾದ ವಾತಾವರಣವು ನಗರಗಳಿಗಿಂತ ಹಳ್ಳಿಯಲ್ಲೇ ಹೆಚ್ಚೆಂದು ದಾಸರ ಅಭಿಪ್ರಾಯವಾಗಿದ್ದಿತು. ಅಲ್ಲದೆ ತಮ್ಮ ಜನ್ಮಭೂಮಿಯೂ, ಜನನಿಯೂ ಸ್ವರ್ಗಕ್ಕಿಂತಲೂ ಮೇಲೆಂದು ದಾಸರ ವಿಶ್ವಾಸವಾಗಿದ್ದಿತು. ಇದರಿಂದಲೇ ತಮ್ಮ ಊರಾದ ಕುತ್ತೆತ್ತೂರು ಗ್ರಾಮದಲ್ಲಿಯೇ ಇಂತಹ ಒಂದು ಭವ್ಯವಾದ ಮನೆಯನ್ನು ಕಟ್ಟಿಸುವ ನಿರ್ಧಾರಕ್ಕೆ ಬಂದರು. ಮಕ್ಕಳ ಉತ್ಸಾಹ, ಊರಿನವರ ಪ್ರೋತ್ಸಾಹ ಇವುಗಳಿಂದ ನೆನಸಿದಂತೆಯೇ ಕಾರ್ಯ ಸಾಗಿಸಲು ಸಾಧ್ಯವಾಯಿತು. ಮಠದಂತೆ ಕಂಗೊಳಿಸುವ ಭವ್ಯವಾದ ಮಂದಿರದ ನಿರ್ಮಾಣವೂ ಆಯಿತು. ಪರಮಾತ್ಮನ ಭಕ್ತರಾದ ದಾಸರ ಈ ಮಂದಿರಕ್ಕೆ "ಗೋವಿಂದ ಭವನ"ವೆಂದು ಹೆಸರಿಡಲಾಯಿತು.

ದಾಸರ ಭಕ್ತಿಯ ಮಹಿಮೆಯಿಂದ ಗೋವಿಂದ ಭವನವು ಭಾಗ್ಯಲಕ್ಷ್ಮಿಯ ಸದನವಾಗಿ ಇಂದಿಗೂ ದೇವಪೂಜೆ, ಬ್ರಾಹ್ಮಣಾರಾಧನೆ ಅತಿಥಿ ಸತ್ಕಾರ ಇವುಗಳಿಗೆ ಪ್ರಸಿದ್ಧವಾಗಿದೆ. ತಮ್ಮ ತಂದೆತಾಯಿಗಳ ಮಹಿಮೆ ಶ್ರೇಷ್ಠತೆಗಳು

ಮಕ್ಕಳಿಗೆ ಅರಿವಾಗುವುದೆಂದರೆ ಇತರರಿಗೆ ತಿಳಿದ ಮೇಲೆಯೇ ಆಗಿದೆ. ಅತಿಪರಿಚಯದ ಅವಜ್ಞೆಯು ಕಾರಣವಲ್ಲದಿದ್ದರೂ ತಮ್ಮ ತಂದೆತಾಯಿಗಳೆಂಬ ಪ್ರೀತಿಯಿಂದ ಒಡನಾಟಗಳಲ್ಲಿ ಅವರ ವಿಶೇಷ ಗುಣಗಳನ್ನು ಮಕ್ಕಳು ಗಮನಿಸುವುದು ಬಹಳ ಕಾಲದ ಮೇಲೆಯೇ ಆಗಿದೆ. ಇತರರು ಕೈ ಎತ್ತಿ ತೋರಿಸಿದಾಗಲೇ ನಮ್ಮವರ ಯೋಗ್ಯತೆಯನ್ನು ನಾವು ಮನಗಾಣುತ್ತೇವೆ. ಹೀಗೆಯೇ ದಾಸರ ಪ್ರಭಾವದ ಅರಿವು ಅವರ ಮಕ್ಕಳಿಗೆ ದಿನೇದಿನೇ ಇತರ ಮಹನೀಯರ ಶ್ಲಾಘನೆಗಳಿಂದ ಅರಿವಾದುದರಲ್ಲಿ ಅಪರಾಧವಿಲ್ಲ. ಇದು ಲೋಕದ ಸ್ವಭಾವ. ಬರಬರುತ್ತಾ ದಾಸರ ಮಕ್ಕಳಿಗೆ ತಂದೆಯವರ ಮಾತುಗಳು ಅಕ್ಷರಶಃ ನಿಜವಾಗಿ ಕಾಣತೊಡಗಿದುದರಲ್ಲಿ ಆಶ್ಚರ್ಯವಿಲ್ಲ. ಆದಕಾರಣ ದಾಸರೇ ಅಪ್ಪಣೆ ಕೊಟ್ಟ ಎಲ್ಲಾ ಧರ್ಮಕಾರ್ಯಗಳನ್ನೂ ಅವರ ಮಕ್ಕಳು ಈಗಲೂ ಸಾಂಗವಾಗಿ ನೆರವೇರಿಸುತ್ತಿದ್ದಾರೆ.

"ಮಾತೃದೇವೋ ಭವ" "ಪಿತೃದೇವೋ ಭವ" ಎಂಬ ಅಮರ ವಾಣಿಗಳು ಇವರಹೃದಯದಲ್ಲಿ ಚೆನ್ನಾಗಿ ನೆಲಸಿವೆ.

ಗೋವಿಂದಭವನದಲ್ಲಿ ದಾಸರ ವರ್ಚಸ್ಸಿದೆ ಎಂಬುದಕ್ಕೆ ಅಲ್ಲಿಗೆ ಅನೇಕ ಮಹನೀಯರೂ ಯಾತ್ರಿಕರೂ ಬರುವುದೆ ಸಾಕ್ಷಿಯಾಗಿದೆ. ಈ ಮಂದಿರವು ಪುಣ್ಯಾತ್ಮರಾದ ಗೋವಿಂದದಾಸರ ಸಂಕೀರ್ತನೆ ಹಾಗೂ ಪಾದಧೂಳಿಗಳಿಂದ ಅಪಾರಶಕ್ತಿಯುಳ್ಳದ್ದಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಎರಡು ವರ್ಷಗಳ ಹಿಂದೆ ಉಡುಪಿಯಲ್ಲಿ ಅಖಿಲಭಾರತ ಮಾಧ್ವ ಸಮ್ಮೇಳನವು ಜರಗಿತು. ಆ ಸಮಾರಂಭಕ್ಕೆ ಮೈಸೂರಿನ ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರೂ ಚಿತ್ತೈಸಿದ್ದರು. ದಾಸರ ಪ್ರಭಾವವನ್ನು ತಿಳಿದಿದ್ದ ಮಹಾರಾಜರು ಅವರ ಜನ್ಮಸ್ಥಳವಾದ ಕುತ್ತೆತ್ತೂರಿಗೂ ಭೇಟಿಯಿತ್ತು ತಮ್ಮ ಆನಂದವನ್ನು ವ್ಯಕ್ತಪಡಿಸಿದರು.

ಮಹಾಪುಣ್ಯಶಾಲಿ

ಗೋವಿಂದದಾಸರು ಚಿಕ್ಕಂದಿನಲ್ಲಿ ಎಷ್ಟು ಕಷ್ಟಪಟ್ಟಿದ್ದರೂ ಜೀವನದ ಅಪರಾಹ್ನದಲ್ಲಿ ಅಷ್ಟೇ ಇಷ್ಟಾರ್ಥಗಳನ್ನು ಅನುಭವಿಸಿದ್ದರು. ಕಷ್ಟದಮೇಲೆ ಸುಖ, ಸುಖದಮೇಲೆ ಕಷ್ಟವೆಂದು ಸಂಸಾರರಥದ ಗಾಲಿಗಳು ಉರುಳುತ್ತಾ ಹೋಗುವುದಕ್ಕೆ ದಾಸರೇ ನಿದರ್ಶನ. ಕೊನೆಯಲ್ಲಿ ಲೌಕಿಕ ಸುಖಗಳನ್ನು ಅನುಭವಿಸುವವರು ಅನೇಕರಿದ್ದರೂ ಲೌಕಿಕ ಪಾರಮಾರ್ಥಿಕಗಳೆರಡನ್ನೂ ಅನುಭವಿಸುವ ಭಾಗ್ಯದೊರೆಯಬೇಕಾದರೆ ಅಂತಹ ಪುಣ್ಯಶಾಲಿಗಳಾಗಬೇಕು. ಕೀರ್ತಿಶಾಲಿಗಳಾದ ಸತ್ಪುತ್ರರು, ಅನುಕೂಲೆಯಾದ ಸಹಧರ್ಮಿಣಿ, ಆದರಿಸುವ ಬಂಧುಗಳು, ಹೃದಯ ವರಿತು ವರ್ತಿಸುವ ಸನ್ಮಿತ್ರರು, ಮನಮೆಚ್ಚಿ ಪ್ರೋತ್ಸಾಹಿಸುವ ಸಹೃದಯರು, ಇವರೆಲ್ಲರೊಡನೆ ಒಡನಾಡಿ ಇಹಲೋಕದ ಯಾತ್ರೆಯನ್ನು ಮುಗಿಸಬೇಕಾದರೆ ಪೂರ್ವಜನ್ಮದ ಸುಕೃತವೂ ಬೇಕು. ಇವೆಲ್ಲಾ ಒಂದೆಡೆ ಸೇರಿದ ಮಹಾನುಭಾವರೆಂದರೆ ಶ್ರೀ ಗೋವಿಂದದಾಸರು. ಎಷ್ಟು ವೈಭವವಿದ್ದರೂ ಇವರಿಗೆ ಭಗವಂತನಲ್ಲಿರುವ ಅಚಲಭಕ್ತಿಯು ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ.

"ಸಂಕಟ ಬಂದಾಗ ವೆಂಕಟರಮಣ" ಎನ್ನುವವರ ಸಾಲಿಗೆ ಇವರು ಸೇರಿದವರಲ್ಲ. ಈ ಪುಣ್ಯಾತ್ಮರು ಸಂಪತ್ತಿನ ರಾಶಿಯಲ್ಲಿದ್ದರೂ ಅದನ್ನೆಲ್ಲಾ ಭಗವಂತನನಿಗೆ ಅರ್ಪಿಸಿ ಅನವರತವೂ ಅವನ ಸೇವೆಯಲ್ಲಿ ತತ್ಪರರಾಗಿದ್ದರು. ವಯಸ್ಸಿನಿಂದ ದೇಹವು ಪಕ್ವವಾಗಿದ್ದಂತೆ ಜ್ಞಾನ ಭಕ್ತಿಗಳಿಂದ ಹೃದಯವೂ ಪರಿಪಕ್ವವಾಗಿದ್ದಿತು. ಮಕ್ಕಳು ಬಂಧು ಬಾಂಧವರೆಂದರೆ ತನ್ನ ಜೀವ ಯಾತ್ರೆಯ ಆಧಾರ ಸ್ತಂಭಗಳೆಂದು ತಿಳಿದಿದ್ದರು. ಜೀವಮಾನದ ಕೊನೆಯ ಹದಿನೈದು ವರ್ಷಗಳಲ್ಲಿ ದಾಸರು ಮಾಡಿದ ಸತ್ಕಾರಗಳಿಗೆಮಿತಿಇಲ್ಲ. ಪ್ರತಿ ವರ್ಷ ಉಡುಪಿಗೆ ಕುಟುಂಬ ಸಮೇತರಾಗಿ ಬಂಧುಬಾಂಧವರೊಡನೆ ಹೋಗಿ ಶ್ರೀಕೃಷ್ಣನಿಗೆ ಮಹಾಪೂಜೆ, ಬ್ರಹ್ಮೋತ್ಸವ ಇತ್ಯಾದಿಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ಯಾರಾದರೂ ದಾಸರ ಸಂಪತ್ತನ್ನು ನೋಡಿ ದಾಸರೇ ನೀವು ಪುಣ್ಯಾತ್ಮರೆಂದು ಶ್ಲಾಘಿಸಿದರೆ "ಈ ಸಂಪತ್ತಿಗೂ ನನಗೂ ಯಾವ

ಸಂಬಂಧವೂ ಇಲ್ಲ. ಎಲ್ಲವೂ ಶ್ರೀಕೃಷ್ಣಪರಮಾತ್ಮನ ಮಹಿಮೆ, ನಾನು ಪುಣ್ಯಾತ್ಮನೆಂದು ಹೇಳಬೇಕಾದರೆ ಈ ವಸ್ತುವಾಹನಗಳಲ್ಲ, ಹೆಂಡಿರು ಮಕ್ಕಳಲ್ಲ, ನನ್ನ ಜೀವನಯಾತ್ರೆಯು ಸುಖವಾಗಿ ಸಾಗಿ ಉತ್ತರಾಯಣದ ಶುಕ್ಲ ಪಕ್ಷದಲ್ಲಿ ಅನಾಯಾಸವಾಗಿ ದಿವಾಮರಣಿಯಾಗ ಬೇಕು, ಆಗ ನಾನು ಪುಣ್ಯಾತ್ಮನೆಂದು ನೀವು ಹೇಳುವ ಮಾತಿಗೆ ಅರ್ಥವಿದೆ'' ಎಂದು ಹೇಳುತ್ತಿದ್ದರು.

ದಾಸರ ಅಂತರ್ದೃಷ್ಟಿ

ಗೋವಿಂದದಾಸರು ಸ್ವರ್ಗಸುಖದ ಸವಿಯನ್ನು ಇಹಲೋಕದಲ್ಲಿಯೇ ತಮ್ಮ ಕೊನೆಯ ದಿನಗಳಲ್ಲಿ ಅನುಭವಿಸುತ್ತಿದ್ದರೆಂದರೆ ಹೆಚ್ಚಲ್ಲ. ನಿತ್ಯಕರ್ಮ, ಜಪಾನುಷ್ಠಾನಗಳು ಯಾವ ಅಂತಕವೂ ಇಲ್ಲದೆ, ಸಾಂಗವಾಗಿ ನಡೆಯುತ್ತಿದ್ದವು. ಮದರಾಸು ಮೈಸೂರು ಪ್ರಾಂತಗಳಲ್ಲಿ ಇವರ ಮಕ್ಕಳು ಕೀರ್ತಿಶಾಲಿಗಳಾಗಿ ಜನಾದರಕ್ಕೆ ಪಾತ್ರರಾಗಿದ್ದರು. ಆಗಾಗ ತೀರ್ಥರೂಪರಿಗಾಗಿ ಫಲವಸ್ತುಗಳನ್ನೂ ಅವರ ಪೂಜಾದಿಗಳಿಗೆ ಬೇಕಾದ ಸೌಕರ್ಯಗಳನ್ನೂ ಈ ಸತ್ಪುತ್ರರು ಒದಗಿಸುತ್ತಿದ್ದರು. ದಾಸರ ಆನಂದಕ್ಕೆ ಪಾರವಿರಲಿಲ್ಲ. ಆದರೂ ಉಡುಪಿಯ ಮಠದೇವಾಲಯಗಳನ್ನು ಸಂದರ್ಶಿಸುವ ತಮ್ಮ ಅಚಲ ಭಕ್ತಿಯನ್ನು ಎಳ್ಳಷ್ಟೂ ಬಿಟ್ಟಿರಲಿಲ್ಲ.

> “ಎಂದಿಗಾವುದೊ ನಿನ್ನ ದರುಶನ
> ಇಂದಿರೇಶ ಮುಕುಂದ ಕೇಶವ”

ಎಂದು ಪದೇ ಪದೇ ಹರ್ಷೋದ್ಗಾರದ ಕಂಬನಿ ಸುರಿಸಿ ಹಾಡುತ್ತಿದ್ದರು. ಪರಮಾತ್ಮನು ದಾಸರ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗುವ ಮೊದಲು ಅವರ ಜ್ಞಾನದೃಷ್ಟಿಯನ್ನು ಬಲಗೊಳಿಸಲು ಇಚ್ಛಿಸಿದಂತೆ ಕಾಣುತ್ತದೆ. ಭಗವಂತನನ್ನು ಕಾಣಲಾರದ ಬಾಹ್ಯದೃಷ್ಟಿಗಳಿಂದ ಫಲವಿಲ್ಲವೆಂಬಂತೆ ದಾಸರಿಗೆ ಬಾಹ್ಯದೃಷ್ಟಿಗಳ ಶಕ್ತಿ ಕುಂದುತ್ತಾ ಬರತೊಡಗಿತು. ಇವರು ದೇಹತ್ಯಾಗ ಮಾಡುವ ಏಳು ತಿಂಗಳ ಮೊದಲು ಇವರ ಬಾಹ್ಯದೃಷ್ಟಿಯು ಸಂಪೂರ್ಣ ಮಸುಕಿತು. “ಬಂದದ್ದೆಲ್ಲಾ ಬರಲಿ, ಶ್ರೀಗೋವಿಂದನ ದಯೆಯೊಂದಿರಲಿ” ಎಂದು ಹಾಡುತ್ತಾ ಕೇವಲ ಜ್ಞಾನದೃಷ್ಟಿಯಿಂದ ಭಗವಂತನನ್ನು ದರ್ಶನ ಮಾಡುವ ಆನಂದದಲ್ಲಿದ್ದರು.

ದಾಸರ ದೇಹಾಂತ್ಯಕ್ಕೆ ಇನ್ನು ಮೂರು ತಿಂಗಳು ಕಾಲವಿದ್ದಿತು. ಒಂದು ದಿನ ಇವರು ಪೂಜೆಗೆ ಕುಳಿತಿದ್ದರು. ಆಗ ಒಂದು ಚಿತ್ತ್ರಲೆಯಾದ ಮುದ್ದು ಮಗುವು ತಮ್ಮ ಮುಂದೆ ಓಡಾಡುತ್ತಿರುವುದು ದಾಸರಿಗೆ ಗೋಚರವಾಯಿತು. ಕಿರುಗೆಜ್ಜೆಗಳ ನಾದದಿಂದ ತುಲಸೀ ಪುಷ್ಪಗಳನ್ನು ತನ್ನಮೇಲೆ ಚೆಲ್ಲಿ ಕೊಳ್ಳುತ್ತಾ, ಪೂಜೆಯ ಪಾತ್ರೆಗಳನ್ನು ಚದರಿಸುತ್ತಾ, ದೇವರ ಸಮರ್ಪಣೆಗೆ ಇಟ್ಟಿರುವ ಫಲವಸ್ತುಗಳನ್ನು ಚೆಲ್ಲುತ್ತಾ, ಮುಗುಳು ಮುಗುಳಾಗಿ ನಕ್ಕುನಲಿ ಯುವ ಮುದ್ದು ಮಗುವನ್ನು ಜ್ಞಾನದೃಷ್ಟಿಯಿಂದ ಕಂಡ ದಾಸರು ಸಂತೋಷ ದಿಂದ "ನೋಡು ಎಂತಹ ಮುದ್ದಾದಮಗು" ಎಂದು ಹೆಂಡತಿಗೆ ಹೇಳುತ್ತ ಪೂಜೆಬಿಟ್ಟು ಮಗುವನ್ನು ಹಿಡಿಯಲು ಕೈಚಾಚಿ ಅತ್ತಿತ್ತ ಓಡುತ್ತಿದ್ದರು. ಆನಂದಬಾಷ್ಪವು ಅವರ ಎರಡುಕಣ್ಣುಗಳಿಂದ ಹರಿಯುತ್ತಿದ್ದಿತು. ಆದರೆ ಹೆಂಡತಿಗೆ ಯಾವ ಮಗುವೂ ಕಾಣಲಿಲ್ಲ. ಇದು ವೃದ್ಧಾಪ್ಯದ ಕನಸೆಂದು ಅವರು ನುಡಿದರು. ಇಂತಹ ಸನ್ನಿವೇಶಗಳು ಮೂರು ನಾಲ್ಕುಸಲ ಒದ ಗಿದ್ದವು. ಈ ಮಗುವನ್ನು ಅಪರೋಕ್ಷ ದೃಷ್ಟಿಯಿಂದ ಕಂಡ ದಾಸರು ಪರ ಮಾನಂದದಿಂದ

ಕೃಷ್ಣನ ನೋಡಿದೆ, ಸರ್ವೋತ್ಕೃಷ್ಟನ ನೋಡಿದೆ ‖ ಪ ‖
ಬಾಲನ ನೋಡಿದೆ ಲಕುಮಿಲೋಲನ ನೋಡಿದೆ ‖

ಬ್ರಹ್ಮೋತ್ಸವದಲ್ಲಿ

ವಯಸ್ಸಿನ ಭರದಿಂದ ಬಸವಳಿದ ದಾಸರು ಕೊನೆಕೊನೆಗೆ ಉಡುಪಿಗೆ ಹೋಗಲು ಅಸಮರ್ಥರಾಗಿದ್ದರು. ಆದರೆ ಒಂದಾವರ್ತಿ ಶ್ರೀಕೃಷ್ಣನ ಸನ್ನಿಧಿಗೆ ಹೋಗಿ ಬರಬೇಕೆಂಬ ಕುತೂಹಲವಿತ್ತು. ಇದನ್ನು ಕುರಿತು ತನ್ನ ತೃತೀಯ ಪುತ್ರ ಶ್ರೀ ಸೀತಾರಾಮರಾಯರಿಗೆ ಆಗಾಗ ಪತ್ರ ಬರೆಯುತ್ತಲೇ ಇದ್ದರು. ಆದರೆ ಕಾರ್ಯಬಾಹುಲ್ಯದಿಂದ ರಾಯರಿಗೆ ಊರಿಗೆ ಹೋಗಲು ಅನುಕೂಲ ವಾಗಲಿಲ್ಲ. ಒಂದುದಿನ ಅನಿರೀಕ್ಷಿತವಾಗಿ ದಾಸರಿಗೆ ಕಠಿಣ ಕಾಯಿಲೆ, ಕೂಡಲೇ ಹೊರಟು ಬರಬೇಕು, ಎಂದು ಅಣ್ಣ ಶ್ರೀ ಹಯಗ್ರೀವಾಚಾರ್ಯರ ಹೆಸರಿನ ತಂತಿಯೊಂದು ಶ್ರೀ ಸೀತಾರಾಮರಾಯರಿಗೆ ಬಂದಿತು. ಕೂಡಲೇ

ಶ್ರೀ ಸೀತಾರಾಮರಾಯರು ಕುಟುಂಬಸಮೇತ ಊರಿಗೆ ಹೋದರು. ತೀರ್ಥರೂಪರವರು ಎಂದಿನಂತೆ ಸುಖವಾಗಿರುವುದನ್ನು ಕಂಡು ಆಶ್ಚರ್ಯಚಕಿತರಾದರು. ಶ್ರೀ ಹಯಗ್ರೀವಾಚಾರ್ಯರು ತಂತಿ ಕಳುಹಿಸಿರಲಿಲ್ಲವೆಂದು ಗೊತ್ತಾಯಿತು. ದಾಸರು ಎಲ್ಲವೂ ಭಗವಂತನ ಲೀಲೆಯೆಂದು ಆನಂದ ಬಾಷ್ಪವನ್ನು ಸುರಿಸಿದರು. ಈ ಅನಿರೀಕ್ಷಿತ ಘಟನೆಯಲ್ಲಿ ಏನೋ ರಹಸ್ಯವಿರಬೇಕೆಂದು ಶ್ರೀ ಸೀತಾರಾಮರಾಯರು ಸಹೋದರರೊಡನೆ ತಮ್ಮ ತಂದೆಯವರನ್ನು ಕರೆದುಕೊಂಡು ಬಂಧುಬಾಂಧವರ ಸಮೇತರಾಗಿ ಉಡುಪಿಗೆ ಬಂದರು. ಇಲ್ಲಿಗೆ ನಮ್ಮೆಲ್ಲರನ್ನೂ ಒಟ್ಟಿಗೆ ಬರಮಾಡಿಕೊಳ್ಳಲು ಈ ತಂತಿಯೇ ಕಾರಣ ಎಂದು ತಿಳಿದು ಶ್ರೀಕೃಷ್ಣನಿಗೆ ತಾವು ಎರಡು ವರ್ಷಗಳ ಮೊದಲೇ ನಿಶ್ಚಯಿಸಿದ್ದ ಬ್ರಹ್ಮೋತ್ಸವವನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದರು. ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನವಿತ್ತು ದಾನ ದಕ್ಷಿಣೆಗಳಿಂದ ಸತ್ಕರಿಸಿದರು. ರಾತ್ರಿ ಉತ್ಸವಕಾಲದಲ್ಲಿ ದಾಸರು ತಮ್ಮ ಹಿಂದಿನ ದಾಸವೇಷವನ್ನು ಧರಿಸಿ ತಾಳ ತಂಬೂರಿಗಳನ್ನು ಹಿಡಿದು ಮಕ್ಕಳು ಮೊಮ್ಮಕ್ಕಳು ಬಂಧುಗಳು ಮಿತ್ರರೆಂದು ಎಲ್ಲರನ್ನೂ ಭಕ್ತಿಯ ರಸದಲ್ಲಿ ನಲಿದಾಡಿಸುತ್ತ ದೇವರ ಮುಂದೆ ಹಾಡಿ ಕುಣಿಯತೊಡಗಿದರು. ದೇವರ ರಥ ಉಡುಪಿಯ ತೆಂಕು ಬೀದಿಯಲ್ಲಿ ಸಾಗಿ ನಿಲ್ಲುವುದು ಸಂಪ್ರದಾಯ. ದಾಸರು ಎಂದಿನಂತೆ

"ಬಾರೊ ಬೇಗ ಬಾರೊ ನೀಲಮೇಘವರ್ಣ ‖ ಪ ‖
ಬಾರೋ ಬೇಗ ಬಾರೊ ವರವೇಲಾಪುರದ ಚೆನ್ನಾ" ‖

ಎಂಬ ದಾಸರ ಹಾಡನ್ನು ಹಾಡಿದರಲ್ಲದೆ,

"ಬಾ ಬಾ ಭಕುತರ ಹೃದಯ ಮಂದಿರ
ಬಾ ಬಾ ಜಗದೋದ್ಧಾರ।
ಬಾ ಬಾ ವೆಂಕಟಶೈಲವಿಹಾರ
ಬಾ ಬಾಽನೇಕವತಾರ ‖"

ಎಂಬ ದೇವರ ನಾಮವನ್ನು ಹಾಡುತ್ತ ದೇವರಿಗೆ ಅಭಿಮುಖವಾಗಿ ಬಾ ಬಾ

ಎಂದು ವೈಮರೆತು ಕುಣಿಯುತ್ತಿದ್ದರು. ಅಷ್ಟರಲ್ಲಿ ರಥವು ನಿಂತಿತು. ಉತ್ಸವ ಮೂರ್ತಿಯು ಕೆಳಗೆ ಪ್ರಾಣದೇವರನ್ನು ಹಿಡಿದು ಕುಳಿತಿದ್ದ ಬ್ರಾಹ್ಮಣನ ತೊಡೆಯಮೇಲೆ ಧುಮುಕಿ ನಲಿದು ನಿಂತಿತು. ದಾಸರ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಪರಮಾತ್ಮನೇ ಇಂತಹ ಘಟನೆಯನ್ನು ಗೈಯ್ದಿರಬೇಕೆಂದು ಎಲ್ಲರೂ ಬೆರಗಾದರು. ಇದನ್ನು ಕಂಡ ಅನೇಕರು—"ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ, ಕುಳಿತು ಪಾಡಲು ನಿಲುವ, ನಿಂತರೆ ನಲಿವ, ನಲಿದರೆ ಒಲಿವೆ ನಿಮಗೆಂಬ" ಎನ್ನುವ ಜಗನ್ನಾಥದಾಸರ ಹಾಡನ್ನು ನೆನಸಿಕೊಂಡರು. ಆಗ ದಾಸರ ವಯಸ್ಸು ೮೫ ಆಗಿದ್ದಿತು. ಭಕ್ತಿಭರದಿಂದ ವೈಮರೆತು ಹಾಡಿ ಕುಣಿದು ದಣಿದ ದಾಸರು ಗುಡಿಯೊಳಗೆ ಬಂದ ಕೂಡಲೇ ಮೂರ್ಛೆ ಹೋದರು. ನೆರೆದ ವಿದ್ವಜ್ಜನರೆಲ್ಲಾ ದೇವರನ್ನು ಪ್ರಾರ್ಥಿಸ ತೊಡಗಿದರು; ಅರ್ಧ ಘಂಟೆಯಲ್ಲೆ ದಾಸರು ನಿದ್ದೆಯಿಂದ ಎಚ್ಚತ್ತಂತೆ ನಿರಾಯಾಸವಾಗಿ ಎದ್ದು ಕುಳಿತರು. ಅಲ್ಲಿದ್ದ ಏಳೆಂಟು ಮಂದಿ ಶ್ರೀಪಾದಂಗಳ ವರಿಗೂ ಮಾಲಿಕೆ ಮಂಗಳಾರತಿಗಳನ್ನು ಮಾಡಿ ಅವರ ಅನುಗ್ರಹಕ್ಕೆ ಪಾತ್ರರಾದರು. ಅಲ್ಲಿ ಸೇರಿದ್ದ ವಿದ್ವಾಂಸರ ಪೈಕಿ ಶ್ರೀ ಕುಂಜಿತ್ತಾಯ ಪಂಡಿತ ವೆಂಕಟರಾಮಾಚಾರ್ಯರು ನೆರೆದ ಮಹನೀಯರನ್ನು ಕುರಿತು ಕಲಿಯುಗದಲ್ಲಿಯೂ ಶ್ರೀ ಪುರಂದರದಾಸ, ಕನಕದಾಸರೇ ಮೊದಲಾದ ದಾಸವರ್ಯರ ಭಕ್ತಿಗೆ ಮೆಚ್ಚಿ ಪರಮಾತ್ಮನು ಒಡಿಬರುತ್ತಿದ್ದನು; ಮುಖ ತಿರುವಿ ನೋಡುತ್ತಿದ್ದನು; ಇತ್ಯಾದಿಯಾಗಿ ಕಿವಿಯಲ್ಲಿ ಕೇಳಿದ್ದೇವೆ. ಅದರೆ ಇಂದು ಶ್ರೀ ಗೋವಿಂದದಾಸರ ಭಕ್ತಿಪಾಶಕ್ಕೆ ಸಿಕ್ಕಿ ಪರಮಾತ್ಮನು ಉತ್ಸವಕಾಲದಲ್ಲಿ ಭಗವಂತನನ್ನು, ಬಾ, ಬಾ ಎಂದು, ಭಕ್ತಿಯಿಂದ ಕರೆಯಲು ಪರಮಾತ್ಮನು ಬಂದುದನ್ನು ಕಣ್ಣಾರೆ ಕಂಡಂತಾಯಿತು ಎಂದು ಅರ್ಥಗರ್ಭಿತವಾಗಿ ಹೇಳಿದುದನ್ನು ಕೇಳಿ ಶ್ರೀಪಾದಂಗಳವರೂ ಇತರ ವಿದ್ವಾಂಸರೂ ತಲೆದೂಗಿದರು. "ಜಗದೀಶನೇ ಸಂಸಾರ ಸಾಗರದ ದಡವನ್ನು ಕಾಣಿಸಿ ಈ ಭವಬಂಧನವನ್ನು ಬಿಡಿಸಿ ಮೋಕ್ಷವನ್ನು ದಯಪಾಲಿಸು" ಎಂದು ಮೂರ್ಛೆಯ ನೆಪದಿಂದ ದಾಸರು ಪ್ರಾರ್ಥಿಸಿರಬೇಕೆಂದು ಅನೇಕರು ಅಭಿಪ್ರಾಯಪಟ್ಟರು. ಮರುದಿನ

ದಾಸರು ಕೊನೆಯದಾಗಿ ಶ್ರೀ ಕೃಷ್ಣನ ಅನುಗ್ರಹವನ್ನೂ ಶ್ರೀಪಾದಂಗಳವರೆಲ್ಲರ ಅನುಜ್ಞೆಯನ್ನೂ ಪಡೆದು ತಮ್ಮ ಬಂಧುಬಳಗದವರೊಂದಿಗೆ ಊರಿಗೆ ಹೊರಟರು.

ದಾಸರ ಪರಲೋಕಯಾತ್ರೆ

ಉಡುಪಿಯಿಂದ ಬಂದಮೇಲೆ ದಾಸರ ಮನೋವೃತ್ತಿಯೇ ಸಂಪೂರ್ಣ ಬದಲಾಗಿದ್ದಿತು. ಭಗವನ್ನಾಮಸ್ಮರಣೆಯಲ್ಲದೆ ಇನ್ನಾವ ವಿಷಯಕ್ಕೂ ಅವರು ಗಮನ ಕೊಡುತ್ತಿರಲಿಲ್ಲ. ಐದಾರು ದಿನಗಳಲ್ಲೇ ದಾಸರು ತಮ್ಮ ಪರಲೋಕ ಯಾತ್ರೆಯನ್ನು ಕೈಗೊಳ್ಳಲಿದ್ದರೂ ನಿತ್ಯಕರ್ಮಗಳನ್ನು ಅತ್ಯಂತ ಶ್ರದ್ಧೆಯಿಂದ ಕ್ರಮವಾಗಿ ಆಚರಿಸುತ್ತಿದ್ದರು. ತಮ್ಮ ಅಂತ್ಯಕಾಲವು ಸಮೀಪಿಸುತ್ತಿವೆಯೆಂದು ಮೊದಲೇ ಗೋಚರವಾಗಿದ್ದಿರಬೇಕು. ಪ್ರತಿದಿನ ಬ್ರಾಹ್ಮಣರಿಗೂ ಸುಮಂಗಲಿಯರಿಗೂ ಸಂತರ್ಪಣೆಗೈಯ್ದು ದಾನ ದಕ್ಷಿಣೆಗಳಿಂದ ತೃಪ್ತಿಪಡಿಸುತ್ತಿದ್ದರು. ಬಂದು ಹೋಗುವ ಅತಿಥಿಗಳಿಗೆಲ್ಲ "ದಾಸರು ಎಲ್ಲಿಗೋ ಯಾತ್ರೆ ಹೊರಡಲಿದ್ದಾರೆ. ಹೀಗೆ ಅತಿಶಯವಾದ ಶ್ರದ್ಧೆ ವಹಿಸುತ್ತಿದ್ದಾರೆ" ಎನ್ನುವಷ್ಟು ದಾನ ಧರ್ಮಗಳು ನಡೆಯುತ್ತಿದ್ದವು. ದಾಸರ ಮನೆಯಲ್ಲಿ ದೊಡ್ಡ ಧರ್ಮಶಾಲೆಯಂತೆ ಬಡವ ಬಲ್ಲಿದನೆಂಬ ಭೇದವಿಲ್ಲದೆ ಎಲ್ಲರಿಗೂ ಸ್ವಾಗತವಿದ್ದಿತು.

ದಾಸರು ಭಗವನ್ನಾಮಗಳನ್ನು ಹೇಳುತ್ತ ಗಂಗಾದಿ ಪಾವನ ತೀರ್ಥಗಳನ್ನು ಸ್ಮರಿಸುತ್ತ ಕೊನೆಯ ದಿವಸ ತಮ್ಮ ಮಕ್ಕಳನ್ನು ಸನ್ನೆಯಿಂದ ಹತ್ತಿರ ಕರೆದರು. ತಾವು ಕೊನೆಗೆ ಹೇಳತಕ್ಕ ಹಿತೋಪದೇಶಗಳನ್ನೆಲ್ಲ ಹೇಳಿದರು. ಇನ್ನೂ ಗಂಟೆ ಐದು ಆಗಿರಲಿಲ್ಲ. ಸೂರ್ಯ ದೇವನೊಡನೆ ತಾನೂ ಬರುವೆನೆಂದು ಸ್ಪರ್ಧಿಸುವಂತೆ ಕಾಣುತ್ತಿದ್ದಿತು. ಅನೇಕ ವೈಷ್ಣವರು ಮುಕ್ತಕಂಠದಿಂದ ಭಗವನ್ನಾಮಗಳನ್ನು ಉಚ್ಚರಿಸುತ್ತಿದ್ದರು. ದಾಸರು ತುಳಸೀ ವೃಂದಾವನದ ಬಳಿಯಲ್ಲಿ ಊರ್ಧ್ವಮುಖವಾಗಿ ಕೈ ಜೋಡಿಸಿ ಮಲಗಿದ್ದರು. ನಾರಾಯಣ, ನಾರಾಯಣ, ನಾ-ರಾ-ಯ-ಣ, ಎಂದು ಗಂಟಲಿನಿಂದಲೇ ಹೊರಡುತ್ತಿದ್ದ ದೇವರನಾಮದ ಚರಮಾಕ್ಷರದೊಡನೆ ದಾಸರ ಚರಮ

ಶ್ವಾಸವು ದೇಹವನ್ನು ಬಿಟ್ಟು ಅಗಲಿತು. ಬಂಧು ಬಾಂಧವ ಅತಿಥಿ ಮಿತ್ರರೆನ್ನದೆ ಎಲ್ಲರೂ ದಾಸರ ಗುಣಗಾನ ಮಾಡಿದರಲ್ಲದೆ ಪುಣ್ಯಾತ್ಮರೆಂದು ಹೃತ್ಪೂರ್ವಕವಾಗಿ ಕೊಂಡಾಡಿದರು. ದಾಸರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು. ಶಾಸ್ತ್ರೋಕ್ತವಾಗಿ ದಾಸರ ಅಂತ್ಯಕ್ರಿಯೆಗಳೆಲ್ಲಾ ಅತಿ ವಿಜೃಂಭಣೆಯಿಂದ ಜರುಗಿದವು.

ದಾಸರ ಆತ್ಮಜ್ಯೋತಿ

"ನೀನಳಿದರೂ ನಿನ್ನೊಡಲಿನ ಜ್ಯೋತಿಗೆ ಅಳಿವೇನು?" ಎಂಬಂತೆ ದಾಸರ ಆತ್ಮಜ್ಯೋತಿಯು ಅವರ ಮಹಿಮೆಯನ್ನು ತಿಳಿದವರಿಗೆಲ್ಲಾ ಒಂದಲ್ಲದಿದ್ದರೊಂದು ರೀತಿಯಲ್ಲಿ ಇಂದೂ ಸಹಾಯಕವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ನಿದರ್ಶನವಾಗಿ ಒಂದೆರಡು ವಿಷಯಗಳನ್ನು ಸೂಚಿಸಿದರೆ ಅತಿಶಯವೆನಿಸದು.

ಸುಮಾರು ಒಂಬತ್ತು ವರ್ಷಗಳ ಹಿಂದಿನ ವಿಷಯ. ಆ ವರ್ಷ ಮಧ್ವನವಮೀ ಉತ್ಸವಕ್ಕೆ ಮೈಸೂರು ಮಹಾರಾಜ ಕಾಲೇಜಿನ ವೇದಾಂತಾಧ್ಯಾಪಕರಾದ ಶ್ರೀ ಎಚ್. ಕೆ. ರಾಜಾರಾವ್, ಎಂ. ಎ., ಇವರನ್ನು ಶ್ರೀ ಸೀತಾರಾಮರಾಯರು ಎರಡು ಸಲ ಅವರಲ್ಲಿ ಹೋಗಿ ಆಮಂತ್ರಿಸಿದರೂ ಅವರು ಅದಕ್ಕೆ ಹೆಚ್ಚಿನ ಗಮನಕೊಡಲಿಲ್ಲ. ಕೆಲವು ದಿನಗಳ ಮೇಲೆ ಶ್ರೀ ಸೀತಾರಾಮರಾಯರು ಮೈಸೂರಿಗೆ ಹೋದಾಗ ಶ್ರೀ ರಾಜಾರಾಯರು ಅವರನ್ನು ಭೇಟಿಮಾಡಿ ಹೀಗೆ ಹೇಳಿದರು.

"ಶ್ರೀ ಮಧ್ವನವಮೀ ಸಮಾರಂಭಕ್ಕೆ ನನಗೆ ಬರಲು ಅನಾನುಕೂಲವಾಯಿತು. ಕ್ಷಮಿಸಬೇಕು. ಅದೇ ದಿನ ರಾತ್ರಿ ಒಂದು ವಿಚಿತ್ರ ಅನುಭವ ನನಗಾಯಿತು. ನಮ್ಮ ಮನೆ ಮುಂಭಾಗದ ಮೆಟ್ಟಲು ಬಳಿ ಒಂದು ಭವ್ಯ ವ್ಯಕ್ತಿ ನಿಂತುದನ್ನು ಕಂಡೆ. ದ್ವಾದಶ ನಾಮ, ಅಂಗಾರ, ಅಕ್ಷತೆ ಇವು ಎದ್ದು ಕಾಣುತ್ತಿದ್ದುವು. ಉಟ್ಟುದು ಸಣ್ಣ ಪಂಚೆ, ಹೆಗಲಮೇಲೆ ಸಣ್ಣ ವಸ್ತ್ರ ಇವುಗಳಿಂದ ಸುಂದರವಾಗಿ ಕಾಣುತ್ತಿದ್ದ ವ್ಯಕ್ತಿಯನ್ನು ಮನೆಯೊಳಗೆ ದಯಮಾಡ

ಬೇಕೆಂದು ಕರೆದೆನು. ಆ ಮಹಾವ್ಯಕ್ತಿ 'ಒಳಗೆ ಬರುವುದಿಲ್ಲ. ನಮ್ಮ ಸೀತಾರಾಮ ಕರೆದರೆ ಮದರಾಸಿಗೆ ಹೋಗಲಿಕ್ಕಾಗಲಿಲ್ಲ. ನಂಜನಗೂಡಿಗೆ ಈ ದಿನ ಹೋಗಲಿಕ್ಕೆ ಸಾಧ್ಯವಾಯಿತೆ?'' ಎಂದು ಪ್ರಶ್ನಿಸಿತು. ನನಗೆ ಮಾತೇ ಹೊರಡಲಿಲ್ಲ. ಏಕೆಂದರೆ ನಂಜನಗೂಡಿನಿಂದ ಆಗತಾನೇ ಉಪನ್ಯಾಸ ಮಾಡಿ ಬಂದು ಮಲಗಿದ್ದೆನು. 'ತಪ್ಪಾಯಿತು, ಕ್ಷಮಿಸಬೇಕು. ತಾವು ಹೇಳಿದಂತೆ ನಡೆದುಕೊಳ್ಳುತ್ತೇನೆ. ದಯಮಾಡಿ ಒಳಗೆ ಬರಬೇಕು' ಎಂದು ತಿರುಗಿ ಬಿನ್ನಹಮಾಡಿದೆ. ಆ ದಿವ್ಯ ಮೂರ್ತಿ ಮನೆಯೊಳಗೆ ಬಂದು ಮಣೆಯಮೇಲೆ ಮಂಡಿಸಿತು. 'ಪರಿಚಯವಾಗಲಿಲ್ಲ' ಎಂದು ವಿನಯದಿಂದ ಕೇಳಿದೆ. ನಾನು ಗೋವಿಂದ. ನನ್ನ ಸೀತಾರಾಮ ಇನ್ನೊಮ್ಮೆ ಮದರಾಸಿಗೆ ಕರೆದಾಗ ಹೋಗಬೇಕು' ಎಂದು ಅಪ್ಪಣೆ ಬಂದಿತು. 'ಅವರು ಕರೆಯಬೇಕಾಗಿಲ್ಲ ನಾನೇ ಹೋಗಿ ಸೇವೆ ಸಲ್ಲಿಸುತ್ತೇನೆ' ಎಂದಾಗ 'ಆಯಿತು' ಎಂದು ಸಂತೋಷದಿಂದ ಗಟ್ಟಿಯಾಗಿ ನಕ್ಕುದನ್ನು ನಾನು ಕಂಡೆ. ಆದರೆ ಕಣ್ಣು ತೆರೆಯುವಷ್ಟರಲ್ಲಿ ಯಾವ ವ್ಯಕ್ತಿಯೂ ಅಲ್ಲಿರಲಿಲ್ಲ.'' ಎಂದು ಶ್ರೀ ರಾಜಾರಾಯರು ಈ ಅದ್ಭುತ ಘಟನೆಯನ್ನು ಶ್ರೀ ಸೀತಾರಾಮರಾಯರಿಗೆ ತಿಳಿಸಿದರು. ತನ್ನ ತೀರ್ಥರೂಪರವರ ಮಹಿಮೆಯನ್ನು ಕಿವಿಯಾರ ಕೇಳಿ ಅಚ್ಚರಿಗೊಂಡ ರಾಯರು "ಹೌದು, ಅವರ ಹೆಸರು ಗೋವಿಂದದಾಸರು" ಎಂದಿಷ್ಟೆ ಗದ್ಗದ ಧ್ವನಿಯಿಂದ ಉತ್ತರವಿತ್ತರು. ಶ್ರೀ ರಾಜಾರಾಯರು "ದಾಸರನ್ನು ನಾನು ಪ್ರತ್ಯಕ್ಷ ಕಾಣದಿದ್ದರೂ ಅವರ ಆತ್ಮಜ್ಯೋತಿ ಕಣ್ಣಿಗೆ ಗೋಚರವಾದಂತಾಯಿತು; ಅಂತೂ ಮುಂದಿನ ವರ್ಷ ಶ್ರೀ ಮಧ್ವನವಮಿಗೆ ನಾನು ಖಂಡಿತ ಬರುತ್ತೇನೆ'' ಎಂದು ಹೇಳಿ ಹೃತ್ಪೂರ್ವಕವಾಗಿ ತಮಗೆ ದಾಸರ ಮೇಲುಂಟಾದ ಗೌರವವನ್ನು ವ್ಯಕ್ತಪಡಿಸಿದರು. ಶ್ರೀ ಸೀತಾರಾಮರಾಯರ ಆಮಂತ್ರಣವನ್ನು ಮನ್ನಿಸಿ ಮುಂದಿನ ವರ್ಷ ಶ್ರೀ ಮಧ್ವನವಮಿ ಸಮಾರಂಭದಲ್ಲಿ ಭಾಷಣ ಮಾಡುತ್ತ ಶ್ರೀ ರಾಜಾರಾಯರು ತಮ್ಮ ಅನುಭವದ ವಿಚಿತ್ರ ಘಟನೆಯನ್ನು ಹೊಗಳಿದರು. ಈ ಸಂಭವಗಳನ್ನು ಕುರಿತು ಆಲೋಚಿಸಿದರೆ ಮಹಾವ್ಯಕ್ತಿಗಳ ಪ್ರಭಾವವು ಯಾವಾಗ ಯಾರಲ್ಲಿ ಹೇಗೆ ಸ್ಫೂರ್ತಿದಾಯಕವಾಗುವುದೆಂದು ಹೇಳಲಾಗುವುದಿಲ್ಲ.

ಗೋವಿಂದದಾಸರ ಸತ್ಪುತ್ರರು

"ಸತ್ಪುತ್ರಾಃ ಕುಲದೀಪಕಾಃ" ಎಂಬುದು ಕೇವಲ ಹಿರಿಯರ ಹೇಳಿಕೆಯಲ್ಲ. ಮಾತಾಪಿತೃಗಳ ಹೆಸರನ್ನು ಉಳಿಸುವವರೂ ಅಳಿಸುವವರೂ ಪುತ್ರರೇ ಆಗಿದ್ದಾರೆ. ಗೋವಿಂದದಾಸರ ಪುತ್ರರು ತಮ್ಮ ತಾಯಿ ತಂದೆಗಳನ್ನು ದೇವತಾ ಸಮಾನರೆಂದು ಪೂಜಿಸುತ್ತಿರುವ ಕಾರಣವೇ ಜನತೆಯ ಪ್ರೀತಿಗೆ ಪಾತ್ರರಾಗಿ ಶ್ರೀಪತಿಯ ಅನುಗ್ರಹಕ್ಕೆ ಭಾಗಿಗಳಾಗಿದ್ದಾರೆ. ಇವರು ಅನೇಕ ಕಡೆಗಳಲ್ಲಿ ಕಟ್ಟಿಸಿರುವ ಭವ್ಯಮಂದಿರಗಳಲ್ಲಿ ದಾಸರು ಅದೃಶ್ಯರಾಗಿದ್ದುಕೊಂಡು ತಮ್ಮ ಮಕ್ಕಳಿಂದ ಅನೇಕ ಸತ್ಕಾರ್ಯಗಳನ್ನು ಈಗಲೂ ನಡೆಯಿಸುತ್ತಿದ್ದಾರೆ. ಹಲವು ಮಂದಿ ಮಠಾಧಿಪತಿಗಳು ಇಲ್ಲಿ ಭಿಕ್ಷಾದಿಗಳನ್ನು ಸ್ವೀಕರಿಸುತ್ತಿದ್ದಾರೆ. ಉಡುಪಿಯ ಅಷ್ಟಮಠಾಧೀಶರಲ್ಲಿ ಅನೇಕರು ಇಲ್ಲಿಗೆ ಬಂದು ಅನುಗ್ರಹಿಸುತ್ತಿದ್ದಾರೆ. ಸುಬ್ರಹ್ಮಣ್ಯ ಮಠದ ಹಿರಿಯ ಶ್ರೀಪಾದಂಗಳವರು, ಉತ್ತರಾದಿಮಠದ ಯತಿಗಳು, ಚಿತ್ರಾಪುರದ ಮಠಾಧಿಪತಿಗಳು, ಭಂಡಾರಕೇರಿ ಮಠದ ಶ್ರೀಪಾದಂಗಳವರು ಇವರೆಲ್ಲ ಇಲ್ಲಿಗೆ ಚಿತ್ತೈಸಿ ದೇವರ ಪೂಜೆಮಾಡಿ ಭಿಕ್ಷೆ, ಪಾದಪೂಜೆ ಇತ್ಯಾದಿಗಳನ್ನು ಆದರದಿಂದ ಸ್ವೀಕರಿಸಿ ಅನುಗ್ರಹಿಸಿದ್ದಾರೆ.

ಶ್ರೀ ಗೋವಿಂದದಾಸರು ಭಜನೆಯಿಂದಲೇ ಇಷ್ಟು ಮಹತ್ವವನ್ನು ಪಡೆದರೆಂದರೆ ಸುಳ್ಳಾಗಲಾರದು. ತಮ್ಮ ೧೭ ನೆಯ ವಯಸ್ಸಿನಿಂದ ೮೫ನೆಯ ವಯಸ್ಸಿನವರೆಗೆ ಎಂದರೆ ೬೮ ವರ್ಷಗಳ ಕಾಲ, ಪ್ರತಿದಿನವೂ ರಾತ್ರಿ ಪೂಜಾಕಾಲದಲ್ಲಿ ಎರಡು ತಾಸುಗಳಷ್ಟು ಕಾಲ, ಇವರು ಭಜನೆ, ಹಾಗೂ ನರ್ತನಗಳ ಮೂಲಕ ದೇವರ ಸೇವೆ ಮಾಡುತ್ತಿದ್ದರು. ಇಂತಹ ಅದ್ವಿತೀಯ ಶ್ರದ್ಧೆಯನ್ನು ಎಲ್ಲಿಯೂ ಕಾಣಲಾರೆವು. ಇವರ ಮಕ್ಕಳು, ಮೊಮ್ಮಕ್ಕಳೆಲ್ಲಾ ಇಂದಿಗೂ ಈ ಭಜನೆಯನ್ನು ಅತ್ಯಂತ ಶ್ರದ್ಧೆಯಿಂದ ನಡೆಯಿಸಿಕೊಂಡು ಬರುತ್ತಿದ್ದಾರೆ.

ಶ್ರೀ ಮಧ್ವನವಮಿ, ಪುರಂದರ ದಾಸರ ಪುಣ್ಯದಿನ, ಅನಂತವ್ರತ, ನವರಾತ್ರಿ ಪೂಜೆ, ತುಳಸಿ ಹಬ್ಬ ಮೊದಲಾದ ಪುಣ್ಯ ಕಾಲಗಳಲ್ಲಿ ಈ ಭಜನೆಯು

ಮದರಾಸಿನ ದಾಸಪ್ರಸಾದದಲ್ಲಿ ಅತಿ ವಿಜೃಂಭಣೆಯಿಂದ ಈಗಲೂ ನಡೆಯುತ್ತಿದೆ. ಈ ಸಮಾರಂಭಕ್ಕೆ ಸುಪ್ರೀಮ್ ಕೋರ್ಟ್ ಮತ್ತು ಮದರಾಸು ಹೈಕೋರ್ಟುಗಳ ಹಲವು ಮಂದಿ ನ್ಯಾಯಾಧೀಶರೂ, ಮದರಾಸು ಮತ್ತು ಮೈಸೂರು ಸರ್ಕಾರದ ಅನೇಕಮಂದಿ ಮಂತ್ರಿಗಳೂ, ಮದರಾಸ್ ನಗರದ ನೂರಾರು ನ್ಯಾಯವಾದಿಗಳೂ, ಹಿರಿಯ ಅಧಿಕಾರಿಗಳೂ, ನಗರದ ಆಢ್ಯ ಮಹನೀಯರೂ, ಹಾಗೂ ಅನೇಕ ವಿದ್ವಾಂಸರೂ, ದಾಸಕೂಟದವರೂ ಮದರಾಸಿನ ದಾಸಪ್ರಸಾದಕ್ಕೆ ದಯಮಾಡಿಸಿ ಪೂಜಾ ಭಜನಾದಿ ವೈಭವಗಳನ್ನು ಕಣ್ಣಾರೆ ಕಂಡು ಆನಂದಪಡುತ್ತಿರುತ್ತಾರೆ. ಇವಕ್ಕೆಲ್ಲ ಶ್ರೀ ಗೋವಿಂದದಾಸರ ಮಹಿಮೆಯೇ ಕಾರಣವೆಂದು ತಿಳಿದು ಅವರೆಲ್ಲರೂ ಭಕ್ತಿಯ ಪ್ರವಾಹದಲ್ಲಿ ತೇಲುತ್ತಿದ್ದಾರೆ. ಇಲ್ಲಿಗೆ ದಯಮಾಡಿಸಿದ್ದ ಹಲವು ಮಂದಿ ಮಹನೀಯ ಭಕ್ತರು ಗೋವಿಂದದಾಸರ ವಿಚಿತ್ರ ಮಹಿಮೆಯ ದೃಶ್ಯಗಳನ್ನು ಕಂಡು ವಿಸ್ಮಯಗೊಂಡಿರುವರು. ಇಂತಹ ಅನೇಕ ನಿದರ್ಶನಗಳಲ್ಲಿ ಒಂದು ಇಲ್ಲಿ ಸೂಚಿತವಾಗಿದೆ.

ಶ್ರೀ ಎಸ್. ಕೃಷ್ಣಮೂರ್ತಿಗಳವರ ಅನುಭವ:—ಸುಮಾರು ಹತ್ತು ವರ್ಷಗಳ ಹಿಂದೆ ಮದರಾಸ್ 'ದಾಸಪ್ರಸಾದ'ದಲ್ಲಿ ಎಂದಿನಂತೆ ನಡೆಯತಕ್ಕ ಮಧ್ವನವಮೀ ಉತ್ಸವಕ್ಕೆ ವೈಷ್ಣವಾಗ್ರೇಸರರಾದ ಮೈಸೂರು ಆಸ್ಥಾನ ವಿದ್ವಾನ್ ಸಂಗೀತಶಾಸ್ತ್ರ ವಿಶಾರದ ಕೆ. ವಾಸುದೇವಾಚಾರ್ಯರನ್ನು ವಿಶೇಷ ಅತಿಥಿಗಳನ್ನಾಗಿ ಶ್ರೀ ಕೆ. ಸೀತಾರಾಮರಾಯರು ಆಮಂತ್ರಿಸಿದ್ದರು. ಅವರ ಜೊತೆಗೆ ಅವರ ಮೊಮ್ಮಗ ಎಸ್. ಕೃಷ್ಣಮೂರ್ತಿ, ಎಂ.ಎ., ಇವರೂ ಬಂದಿದ್ದರು.

ಅದೇ ದಿನ ರಾತ್ರಿ ಕೃಷ್ಣಮೂರ್ತಿರಾಯರು ಕೊಠಡಿಯಲ್ಲಿ ಮಲಗಿ ನಿದ್ರೆ ಹೋಗುತ್ತಿದ್ದರು. ಅರ್ಧರಾತ್ರಿ ಸಮಯದಲ್ಲಿ ಯಾರೋ ಬಾಗಿಲು ತೆಗೆದುಕೊಂಡು ತನ್ನ ಹಾಸಿಗೆಯ ಬಳಿ ಎರಡು ಮೂರು ಸಲ ಬಂದು ಹೋದಂತೆ ತೋರಲು, ಕೃಷ್ಣಮೂರ್ತಿರಾಯರು ಶಂಕಿತರಾಗಿ ಎದ್ದು ಹೊರಗೆ ಬಂದು ಜಗಲಿ ಮೇಲೆ ಮಲಗಿದ್ದ ಮನೆಯ ಕೆಲಸದ ರಾಮುನನ್ನು ಎಬ್ಬಿಸಿ "ನೀನು

ಒಳಗೆ ನನ್ನ ಕೋಣೆಗೆ ಬಂದೆಯಾ?" ಎಂದು ಕೇಳಿದರು. ಅವನು ನಿದ್ದೆ ಕಣ್ಣಿನಿಂದ "ನಾನು ಏಕೆ ಒಳಗೆ ಬರಬೇಕು ಸ್ವಾಮೀ?" ಎಂದು ಉತ್ತರ ಕೊಡಲಾಗಿ ಅವರು ಪುನಃ ಬಂದು ಮಲಗಿದರು ಅರ್ಧ ತಾಸು ಕಳೆದ ನಂತರ ಅದೇ ವ್ಯಕ್ತಿಯು ಪುನಃ ಕೃಷ್ಣಮೂರ್ತಿರಾಯರ ಸಮೀಪಕ್ಕೆ ಬಂದು "ಅಪ್ಪಾ, ಹೆದರ ಬೇಡ. ನಾನು ಸೀತಾರಾಮನ ತಂದೆ. ಸೀತಾರಾಮನ ಅಭ್ಯುದಯಕ್ಕೆ ಕಾರಣವೇನು ಗೊತ್ತುಂಟೇ? ಅವನು ಹರಿಗುರುಗಳಲ್ಲಿಯೂ, ತಂದೆತಾಯಿಗಳಲ್ಲಿಯೂ ಅತಿಶಯವಾಗಿ ಇಟ್ಟಿರುವ ಭಕ್ತಿಯಿಂದ ಅವರೆಲ್ಲರ ಪರಮಾನುಗ್ರಹಕ್ಕೆ ಪಾತ್ರನಾಗಿದ್ದಾನೆ. ನೀನೂ ಇವನಂತೆಯೇ ಭಕ್ತಿವಂತ ನಾಗಿರಬೇಕು. ನಿನಗೂ ನಿನ್ನ ಪ್ರೀತಿಯ ತಾತಂದಿರಿಗೂ, ನಿನ್ನ ಸಹೋದರ ರಿಗೂ ಮುಂದೆ ಐದಾರು ವರ್ಷಗಳೊಳಗೆ ವಿಶೇಷ ಶ್ರೇಯಸ್ಸಾಗುತ್ತದೆ. ನೀನೂ ನನ್ನ ಮಗನಂತೆಯೇ" ಎಂದು ಹೇಳಿ ತಲೆಯಿಂದ ಕಾಲು ತನಕ ಕೃಷ್ಣಮೂರ್ತಿರಾಯರ ಮೈಮೇಲೆ ಕೈ ಸವರಿ ಹೊರಟು ಹೋದಂತೆ ಆಯಿತು. ಆ ವ್ಯಕ್ತಿಯು ಆಜಾನುಬಾಹುವಾಗಿದ್ದು ಚಿಕ್ಕ ಪಂಚೆ ಉಟ್ಟಿದ್ದಿತು. ಎಡದ ಹೆಗಲ ಮೇಲೆ ಇನ್ನೊಂದು ಪಂಚೆ ಇದ್ದಿತು. ಮರುದಿನ ಶ್ರೀ ದಾಸರ ಪಟ ವನ್ನು ನೋಡಿದ ಕೃಷ್ಣಮೂರ್ತಿ ರಾಯರು 'ಇವರೇ ಆ ವ್ಯಕ್ತಿ' ಎಂದು ನಿರ್ಧರಿಸಿದರು.

ಈ ವೃತ್ತಾಂತವನ್ನು ಮರುದಿನ ಕೃಷ್ಣಮೂರ್ತಿರಾಯರು ಅಲ್ಲಿ ನೆರದಿದ್ದ ಜನರಿಗೆ ಹೇಳಿದಾಗ ಎಲ್ಲರೂ ಆಶ್ಚರ್ಯಚಕಿತರಾದರು. ಮಹಾಪುರುಷರ ದರ್ಶನದೊರಕಿದುದು ತನ್ನ ಪೂರ್ವಪುಣ್ಯದ ಫಲವೆಂದು ಹೇಳಿ, ಕೃಷ್ಣಮೂರ್ತಿ ರಾಯರು ಆ ಮಹಾನುಭಾವರ ಭಾವಚಿತ್ರದ ಒಂದು ಪ್ರತಿಯನ್ನು ಸೀತಾರಾಮರಾಯರಿಂದ ತೆಗೆದುಕೊಂಡು ಊರಿಗೆ ಹೋಗಿ ತನ್ನ ಪೂಜಾ ಗೃಹದಲ್ಲಿ ಇಟ್ಟುಕೊಂಡು ದಿನವೂ ಗೋವಿಂದದಾಸರನ್ನು ಸ್ಮರಿಸುವವರಾಗಿ ದ್ದಾರೆ. ಆ ಮಹಾನುಭಾವರಿಂದ ತನಗೂ ತನ್ನ ಕುಟುಂಬಕ್ಕೂ ಅನೇಕ ತರಹದ ಅನುಕೂಲತೆಗಳು ನಿರಾಯಾಸವಾಗಿ ಕೈಗೂಡಿ ಜಯಪ್ರದವಾಗಿವೆ, ಎಂದು ಕೃಷ್ಣಮೂರ್ತಿ ರಾಯರು ಮುಕ್ತಕಂಠದಿಂದ ಹೇಳುತ್ತಿದ್ದಾರೆ.

ಅದು ಅಲ್ಲದೆ ಕೃಷ್ಣಮೂರ್ತಿರಾಯರ ತಾತಂದಿರಾದ ಸುಪ್ರಸಿದ್ಧ ಸಂಗೀತ ಕಲಾನಿಧಿಗಳಾದ ಶ್ರೀ ವಾಸುದೇವಾಚಾರ್ಯರು ಶ್ರೀ ಗೋವಿಂದದಾಸರ ಪ್ರೀತಿಗೂ, ಪರಮಾನುಗ್ರಹಕ್ಕೂ ಪಾತ್ರರಾಗಿ ಮೈಸೂರು ಅರಮನೆಯಿಂದ ಅನೇಕ ತರಹದ ಸಹಾಯಗಳನ್ನೂ, ಗೌರವಪದವಿಗಳನ್ನೂ ಹೊಂದಿರುವರು. ಅದಲ್ಲದೆ ಇತ್ತೀಚೆಗೆ ಡಿಲ್ಲಿಯಲ್ಲಿ ಜರುಗಿದ ಮಹಾ ಸಭೆಯಲ್ಲಿ ಸಂಗೀತ ಸಾಹಿತ್ಯಗಳ ವಿಜ್ಞಾನಾತಿಶಯಕ್ಕಾಗಿ ಇಂಡಿಯಾ ಸರ್ಕಾರದ ಪರವಾಗಿ ಭಾರತವರ್ಷದ ಅಧ್ಯಕ್ಷರಾದ ಶ್ರೀಯುತ ರಾಜೇಂದ್ರ ಪ್ರಸಾದರವರಿಂದ ಬಹುಮಾನ ಪೂರ್ವಕವಾಗಿ ವಿಕೀರ್ಣವಾದ ಮಹಾಸಂಭಾವನೆ ಪಡೆದು ದಕ್ಷಿಣ ಭಾರತಕ್ಕೆ ಹೆಗ್ಗಳಿಕೆ ತಂದಿರುವರು. ವಾಸುದೇವಾಚಾರ್ಯರಿಗೆ ಗೋವಿಂದದಾಸರ ಮೇಲೆ ವಿಶೇಷವಾದ ಪೂಜ್ಯ ಭಾವನೆಯಿತ್ತು. ಶ್ರೀ ಆಚಾರ್ಯರು ಸುಮಾರು, ಇಪ್ಪತ್ತೈದು ವರ್ಷಗಳ ಹಿಂದೆ ಮೈಸೂರಿನಲ್ಲಿ ತಮ್ಮ ವಾಸಕ್ಕಾಗಿ ಸ್ವಂತ ಗೃಹವನ್ನು ಕಟ್ಟಿಸ ಬೇಕೆಂದು ನಿಶ್ಚಯಿಸಿದರು, ಗೃಹ ನಿರ್ಮಾಣಕ್ಕಾಗಿ ಕೊಂಡುಕೊಂಡ ಸ್ಥಳಕ್ಕೆ, ಮನೆಯನ್ನು ಕಟ್ಟುವ ಮೊದಲು, ಶ್ರೀ ಗೋವಿಂದದಾಸರನ್ನು ಮರ್ಯಾದೆ ಪೂರ್ವಕವಾಗಿ ಕರೆದು ಕೊಂಡು ಹೋದರು. ಆ ಸ್ಥಳದಲ್ಲಿ ಶ್ರೀದಾಸರ ಪಾದಧೂಳಿಯನ್ನು ಹಾಕಿ ಅನುಗ್ರಹಿಸಬೇಕೆಂಬ ಶ್ರೀ ಆಚಾರ್ಯರ ಪ್ರಾರ್ಥನೆಯನ್ನು ಅವರು ಪೂರೈಸಿದರು. ಶ್ರೀದಾಸರಲ್ಲಿ ಶ್ರೀ ವಾಸುದೇವಾಚಾರ್ಯರಗಿದ್ದ ಭಕ್ತಿಗೆ ಇದೊಂದೇ ನಿದರ್ಶನ ಸಾಲದೇ? ಶ್ರೀ ದಾಸರು ಮೈಸೂರಿನಲ್ಲಿದ್ದಾಗ ವಾಸುದೇವಾಚಾರ್ಯರು ಅನೇಕಾವೃತ್ತಿ ಅವರ ವಸತಿಗೆ ಹೋಗಿ ದೇವರನಾಮಗಳನ್ನು ಹಾಡಿ ಅವರನ್ನು ಸಂತೋಷಪಡಿಸುತ್ತಿದ್ದರು.

ಈ ಮೊದಲು ಸೂಚಿಸಿರುವ ಸಾಲಿಗ್ರಾಮದ ಕಥೆಯು ನಡೆದ ಸಂದರ್ಭದಲ್ಲಿ ವಾಸುದೇವಾಚಾರ್ಯರು ಶ್ರೀ ದಾಸರ ಮನೆಗೆ ಹೋಗಿ ಸಾಲಿಗ್ರಾಮವು ತಿರುಗಿ ಬಂದ ರೀತಿಯನ್ನು ನೋಡಿ ಆಶ್ಚರ್ಯ ಚಕಿತರಾಗಿ ದೇವರ ಮುಂದೆ ಕುಳಿತುಕೊಂಡು ಆತನ ಲೀಲೆಗಳನ್ನು ಗಾನ ಮಾಡಿದರು. ಗೋವಿಂದದಾಸರ

ಚರಿತ್ರೆಯನ್ನು ಬರೆಯುವ ಸುದ್ದಿ ಕೇಳಿ ಅವರು ಹರ್ಷ ಭರಿತರಾಗಿ, ಈ ಕೆಳಗಿನ ಶ್ಲೋಕವನ್ನು ರಚಿಸಿ ಇದರಲ್ಲಿ ಪ್ರಕಟಿಸುವಂತೆ ಕಳುಹಿಸಿಕೊಟ್ಟಿರುತ್ತಾರೆ.

ಶ್ರೀಮನ್ ಮಧ್ವಮತೇ ಹರಿಪ್ರಿಯತಮೋ ಸದ್ವಂಶಜೋ ಯೋ ದ್ವಿಜಃ
ಶ್ರೀ ಗೋವಿಂದ ಪದಾರವಿಂದ ಭಜನಾನಂದಾಬ್ಧಿ ಮಗ್ನಃ ಸದಾ |
ಸತ್‌ಸಂತಾನ ಸುವೃದ್ಧಿ ಸದ್ಗುರುಕೃಪಾ ಪೂರ್ಣೋ ವಿರಕ್ತಶ್ಚ ಯಃ
ಸ್ಮರ್ತವ್ಯಃ ಸತತಂ ಸ್ವಧರ್ಮ ನಿರತೋ ಗೋವಿಂದದಾಸಾಭಿಧಃ |

ಅಂದರೆ " ಶ್ರೀ ಕೃಷ್ಣ ಪರಮಾತ್ಮನಿಗೆ ಅತ್ಯಂತ ಪ್ರಿಯವಾದ ಮಧ್ವಮತದ ಸದ್ವಂಶದಲ್ಲಿ ಜನಿಸಿದ ಬ್ರಾಹ್ಮಣೋತ್ತಮರೂ ಲಕ್ಷ್ಮೀಪತಿಯಾದ ಶ್ರೀಕೃಷ್ಣ ಪರಮಾತ್ಮನ ಭಜನೆಯೆಂಬ ಆನಂದಸಾಗರದಲ್ಲಿ ಸದಾ ಮುಳುಗಿರುವವರೂ, ಸತ್‌ಸಂತಾನಸಮೃದ್ಧಿ ಮತ್ತು ಸದ್ಗುರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದವರೂ, ವಿರಕ್ತ ಶಿಖಾಮಣಿಗಳಾಗಿ ಸ್ವಧರ್ಮದಲ್ಲಿ ನಿರತರಾಗಿರುವವರೂ ಆದ ಶ್ರೀ ಗೋವಿಂದದಾಸರೆಂಬ ಭಗವದ್ಭಕ್ತರು ಯಾವಾಗಲೂ ಸ್ಮರಣೆಗೆ ಯೋಗ್ಯರಾದವರು. "

ಮಧ್ವನವಮೀ ಮೊದಲಾದ ವಿಶೇಷ ಸಂದರ್ಭಗಳಲ್ಲಿ ದಾಸಪ್ರಸಾದಕ್ಕೆ ದಯಮಾಡಿಸಿರುವ ಎಲ್ಲಾ ಮಹನೀಯರ ಹೆಸರುಗಳನ್ನೂ ಈ ಸಂಕ್ಷಿಪ್ತ ಚರಿತ್ರೆಯಲ್ಲಿ ಹೇಳುವುದು ಅಸಾಧ್ಯ. ಆದರೆ ಕೆಲವು ಮಹನೀಯರ ಹೆಸರುಗಳನ್ನು ಹೇಳದಿರುವುದೂ ಸರಿಯಲ್ಲ. ನಮ್ಮ ದಕ್ಷಿಣ ಕರ್ನಾಟಕ ದೇಶಕ್ಕೆ ಭೂಷಣರಾಗಿದ್ದ, ಕೀರ್ತಿಶೇಷರಾದ ಡಾಕ್ಟರ್ ಯು. ರಾಮರಾಯರು ಅಲ್ಲಿ ನಡೆಯತಕ್ಕ ಸಮಾರಂಭಗಳಲ್ಲಿ ಸನ್ನಿಹಿತರಾಗಿದ್ದು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಶ್ರೀಯುತರಾದ ಅನಂತಶಯನಂ ಅಯ್ಯಂಗಾರ್, ಎಂ. ಪತಂಜಲಿ ಶಾಸ್ತ್ರಿ, ಸರ್. ಎಸ್. ವರದಾಚಾರ್, ಡಾಕ್ಟರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಪಿ. ವಿ. ರಾಜಮನ್ನಾರ್, ಸಿ. ಸುಬ್ರಹ್ಮಣ್ಯಮ್, ಎ. ಬಿ. ಶೆಟ್ಟಿ, ಡಾಕ್ಟರ್ ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾಕ್ಟರ್ ಯು. ಕೃಷ್ಣರಾವ್, ಡಾಕ್ಟರ್ ಯು. ಎಲ್. ನಾರಾಯಣರಾವ್, ರಾಜಾ ಎಮ್. ಎ. ಮುತ್ತಯ್ಯ ಚೆಟ್ಟಿಯಾರ್, ಡಾಕ್ಟರ್ ಆರ್. ಎಂ. ಅಲಗಪ್ಪ

ಚೆಟ್ಟಿಯಾರ್, ಎಸ್. ವಿ. ರಾಮಮೂರ್ತಿ, ದಿವಂಗತ ಶ್ರೀಮತೀ ಎಸ್. ರಾಧಾಕೃಷ್ಣ ಮತ್ತು ಪದ್ಮಭೂಷಣ ಶ್ರೀಮತೀ ರುಕ್ಮಿಣೀದೇವಿ ಮೊದಲಾದ ಸುಪ್ರಸಿದ್ಧ ಮಹನೀಯರು ಇಲ್ಲಿಯ ಪೂಜಾದಿ ವೈಭವಗಳನ್ನು ನೋಡಿ ತಮಗುಂಟಾದ ಆನಂದಾತಿಶಯವನ್ನು ವ್ಯಕ್ತಪಡಿಸಿದ್ದಾರೆ.

ದೈವಭಕ್ತಿ, ಗುರುಭಕ್ತಿಗಳಲ್ಲಿ ಮೈಸೂರಿನ ರಾಜವಂಶವು ಪ್ರಸಿದ್ಧವಾದುದು. ಅದರಲ್ಲಿಯೂ ವಿಶಾಲ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರು ಭಕ್ತಶಿಖಾಮಣಿಗಳಾಗಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕೆಲವು ಸಮಯದ ಹಿಂದೆ ಇವರು ದಕ್ಷಿಣ ದೇಶದ ದೇವಾಲಯಗಳ ದರ್ಶನಕ್ಕಾಗಿ ಕುಟುಂಬ ಸಮೇತರಾಗಿ ಹೊರಟವರು ಮದರಾಸಿನ ದಾಸಪ್ರಸಾದಕ್ಕೆ ಚಿತ್ತೈಸಿ ದೇವರ ದರ್ಶನ ಮಾಡಿ, ಇಲ್ಲಿಯ ಪೂಜೆ ಭಜನೆ ವೈಭವಗಳನ್ನು ನೋಡಿ ಆನಂದಭರಿತರಾಗಿ ಶ್ರೀ ಕೃಷ್ಣದೇವರಿಗೆ ಚಿನ್ನದ ಪದಕವನ್ನು ಅರ್ಪಿಸಿದರು. ಅಷ್ಟೇ ಅಲ್ಲದೆ ಸೀತಾರಾಮರಾಯರು ಮದರಾಸಿನಲ್ಲಿ ಆಧುನಿಕ ರೀತಿಯಿಂದ ನೂತನವಾಗಿ ಕಟ್ಟಿಸಿರುವ '**ದಾಸಪ್ರಕಾಶ**'ದ ಉದ್ಘಾಟನಾ ಸಮಾರಂಭವನ್ನು ಶ್ರೀಮನ್ಮಹಾರಾಜರವರು ಅಭಿಮಾನ ಪುರಸ್ಸರವಾಗಿ ನೆರವೇರಿಸಿದರು.

ಇತ್ತೀಚೆಗೆ ಪದ್ಮನಾಭದಾಸರೆಂದು ಬಿರುದನ್ನು ಪಡೆದಿರುವ ತಿರುವಾಂಕೂರಿನ ರಾಮವರ್ಮ ಮಹಾರಾಜರವರೂ ಅವರ ಮಾತೃಶ್ರೀಯರಾದ ಶ್ರೀಮತೀ ಸೇತು ಪಾರ್ವತೀಬಾಯಿ ಮಹಾರಾಣಿಯವರೂ ಮದರಾಸಿಗೆ ಬಂದಿದ್ದ ಸಂದರ್ಭದಲ್ಲಿ ದಾಸಪ್ರಸಾದಕ್ಕೆ ಚಿತ್ತೈಸಿ ಇಲ್ಲಿನ ಪೂಜಾ ನರ್ತನ ಸೇವಾದಿ ಸಂಭ್ರಮಗಳನ್ನು ನೋಡಿ, ಈ ದಾಸಪ್ರಸಾದವು 'ಭಕ್ತಿ ದೇವತೆಯ ತವರುಮನೆ' ಎಂದು ಹಾರ್ದವಾದ ತಮ್ಮ ಅಭಿಪ್ರಾಯವನ್ನು ಬಹಿರಂಗ ಪಡಿಸಿದ್ದಲ್ಲದೆ ವಿಶೇಷವಾದ ಕಾಣಿಕೆಯನ್ನು ಸಮರ್ಪಿಸಿದರು.

ಶ್ರೀ ಸಿ. ರಾಜಗೋಪಾಲಾಚಾರ್ಯರು ಮದರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ದಾಸಪ್ರಸಾದದಲ್ಲಿ ನಡೆಯುವ ಅಪೂರ್ವವಾದ ಭಜನಾಕ್ರಮ

ವನ್ನು ನೋಡಿ ಆನಂದ ಪರವಶರಾಗಿ ಭಕ್ತಿಯ ವಾತಾವರಣವನ್ನು ಶ್ಲಾಘಿಸಿದರು. ಅದಲ್ಲದೆ ರಾಜಾಜಿಯವರು ಬರೆದು ಕಳುಹಿಸಿದ ಸಂದೇಶದಲ್ಲಿ ಲೋಕದ ಜನತೆಗೆ ಪಿತೃಭಕ್ತಿಯ ಮಹಾ ಮಹಿಮೆಯನ್ನು ಎತ್ತಿ ತೋರಿಸುತ್ತ "ಮಗನು ತನ್ನ ತಂದೆಯನ್ನು ದೇವರು ಹಾಗೂ ಗುರು, ಎಂದು ಹೇಗೆ ಪೂಜ್ಯಭಾವನೆಯಿಂದ ನೋಡಬಹುದು ಎಂಬುದನ್ನು ಶ್ರೀ ಸೀತಾರಾಮರಾಯರು ಕಾರ್ಯ ರೂಪದಲ್ಲಿ ತೋರಿಸುತ್ತಿದ್ದಾರೆ. ಭಕ್ತಿಯಿಂದ ತುಂಬಿ ತುಳುಕಾಡುತ್ತಿರುವ ತಮ್ಮ ಮನೆಯನ್ನು ದೇವಾಲಯದಂತೆ ಮಾಡಿಕೊಂಡು ತಮ್ಮ ಮಕ್ಕಳಿಗೂ ಈ ವಾತಾವರಣದಲ್ಲಿ ಶಿಕ್ಷಣ ಕೊಡುತ್ತಿರುವುದು ನಮ್ಮೀ ಜನತೆಗೆಲ್ಲಾ ಆದರ್ಶಪ್ರಾಯವಾಗಿರುವುದು. ದೇವರು ಅವರಿಗೂ ಅವರ ಕುಟುಂಬಕ್ಕೂ ಅವಿಚ್ಛಿನ್ನವಾದ ಧರ್ಮಶ್ರದ್ಧೆಯನ್ನೂ, ಅಮಿಶ್ರಿತವಾದ ಸಂತೋಷವನ್ನೂ ಕೊಟ್ಟು ಕಾಪಾಡಲೆಂದು ಹೃತ್ಪೂರ್ವಕ ಆಶಿಸುತ್ತೇನೆ" ಎಂದು ಹೇಳಿರುತ್ತಾರೆ. ಹೀಗೆ ಶ್ರೀಗೋವಿಂದದಾಸರು ತಮ್ಮ ಭೌತಿಕ ದೇಹವನ್ನು ತ್ಯಜಿಸಿದ್ದರೂ, ಎಲ್ಲರ ಭಕ್ತಿ ವಿಶ್ವಾಸಗಳಿಗೆ ಪಾತ್ರರಾಗಿ, ಆತ್ಮಜ್ಯೋತಿಯಿಂದ ಪ್ರಕಾಶಿಸುತ್ತಿದ್ದಾರೆ. ಇಂತಹ ಮಹಾ ಪುರುಷರನ್ನು ಯಾರು ಭಕ್ತಿಯಿಂದ ಸೇವಿಸುತ್ತಾರೋ ಅವರಿಗೆ ಸರ್ವವಿಧ ಪುರುಷಾರ್ಥಗಳೂ ಸುಲಭವಾಗಿ ದೊರಕುವುದರಲ್ಲಿ ಸಂದೇಹವಿಲ್ಲ.

ಸರ್ವೇ ಜನಾಃ ಸುಖಿನೋ ಭವಂತು ;
ಸಮಸ್ತ ಸನ್ಮಂಗಳಾನಿ ಭವಂತು.

—: o :—